ಸಂಪುಟ : 11 ಸಂಚಿಕೆ: 82 ಪುಟ : 4+2 ಬೆಲೆ: 3.00 ಗುರುವಾರ ಎಪ್ರಿಲ್ 30 2026 Mob : 9448326533- 9019256545 ಗದಗ

ಸಂಪಾದಕರು : ಎಚ್.ಎಮ್. ಶರೀಫನವರ್

# ವಿಜಯ ಸಾಕ್ಷಿ

ವಾಸ್ತವ, ವಸ್ತುನಿಷ್ಠ, ವಿಭಿನ್ನ... VIJAYASAKSHI KANNADA DAILY ಕನ್ನಡ ದಿನಪತ್ರಿಕೆ




Volume : 11 Issue : 82 Pages : 4+2 Price : 3.00 Thursday April 30 2026 Gadag RNINo:KARKAN/2015/63412 E-mail: vijayasakshidaily@gmail.com Post Regn.No:GDG/72/2023-25

### 6 ಸ್ಮಾರಕಗಳ ಶಿಲಾನ್ಯಾಸ, 10 ದೇವಾಲಯ 10 ಬಾವಿಗಳ ಅನಾವರಣ

## ಮೇ. 2ರಂದು ಲಕ್ಕುಂಡಿಯಲ್ಲಿ ಪಾರಂಪರಿಕ ಅಭಿವೃದ್ಧಿಗೆ ಬೃಹತ್ ಚಾಲನೆ

**■ವಿಜಯಸಾಕ್ಷಿ ಸುದ್ದಿ, ಗದಗ**

ಜಿಲ್ಲೆಯ ಐತಿಹಾಸಿಕ ಲಕ್ಕುಂಡಿ ಪ್ರದೇಶದ ಸಂರಕ್ಷಣೆ ಹಾಗೂ ಅಭಿವೃದ್ಧಿಗೆ ಮಹತ್ವದ ಹೆಜ್ಜೆಯಾಗಿ 6 ಸ್ಮಾರಕಗಳ ಕಾಮಗಾರಿಗಳಿಗೆ ಶಿಲಾನ್ಯಾಸ ಹಾಗೂ 10 ದೇವಾಲಯ ಮತ್ತು 10 ಬಾವಿಗಳ ಅನಾವರಣ ಕಾರ್ಯಕ್ರಮವನ್ನು ಮೇ 2ರಂದು ಹಮ್ಮಿಕೊಳ್ಳಲಾಗಿದೆ. ಗದಗ ಜಿಲ್ಲಾಡಳಿತ, ಜಿಲ್ಲಾ ಪಂಚಾಯತ್, ಪ್ರವಾಸೋದ್ಯಮ ಇಲಾಖೆ, ಪುರಾತತ್ವ-ಸಂಗ್ರಹಾಲಯ ಮತ್ತು ಪರಂಪರೆ ಇಲಾಖೆ (ಮೈಸೂರು) ಹಾಗೂ ಲಕ್ಕುಂಡಿ ಪಾರಂಪರಿಕ ಪ್ರದೇಶ ಅಭಿವೃದ್ಧಿ ಪ್ರಾಧಿಕಾರ ಇವರ ಸಂಯುಕ್ತ ಸಹಯೋಗದಲ್ಲಿ ಹಾಲಗುಂಡಿ ಬಸವೇಶ್ವರ ದೇವಾಲಯ ಆವರಣದಲ್ಲಿ ಬೆಳಿಗ್ಗೆ 10:30ಕ್ಕೆ ಈ ಕಾರ್ಯಕ್ರಮ ನಡೆಯಲಿದೆ. ಕಾರ್ಯಕ್ರಮವನ್ನು ಉಸ್ತುವಾರಿ ಸಚಿವ ಡಾ. ಎಚ್.ಕೆ. ಪಾಟೀಲ ಉದ್ಘಾಟಿಸಲಿದ್ದು, ವಿಧಾನ ಪರಿಷತ್ ಸಭಾಪತಿ ಬಸವರಾಜ ಹೊರಟ್ಟಿ ಹಾಗೂ ಸಚಿವ ಶಿವರಾಜ ಎಸ್. ತಂಗಡಗಿ ಘನ ಉಪಸ್ಥಿತಿ ವಹಿಸುವರು.

ಮುಖ್ಯ ಅತಿಥಿಗಳಾಗಿ ಸಲೀಂ ಅಹ್ಮದ್, ಜಿ.ಎಸ್. ಪಾಟೀಲ, ಬಸವರಾಜ ಬೊಮ್ಮಾಯಿ, ಪಿ.ಸಿ. ಗದ್ದಿಗೌಡರ ಸೇರಿದಂತೆ ಹಲವು ಗಣ್ಯರು ಭಾಗವಹಿಸಲಿದ್ದಾರೆ.

ಹಾಲಗುಂಡಿ ಬಸವೇಶ್ವರ ದೇವಾಲಯ ರೂ 1.58 ಕೋಟಿ, ಕನ್ನರ ಬಾವಿ (ಭಾಗ-2) ರೂ 1.70 ಕೋಟಿ, ಮಲ್ಲಿಕಾರ್ಜುನ ದೇವಾಲಯ ಮತ್ತು ಗದ್ದುಗೆ ರೂ1.67 ಕೋಟಿ, ವಿರೂಪಾಕ್ಷೇಶ್ವರ ದೇವಾಲಯ ರೂ 1.81 ಕೋಟಿ,

ಚಂದ್ರಮೌಳೇಶ್ವರ ದೇವಾಲಯ ರೂ1.86 ಕೋಟಿ ಹಾಗೂ ಕಲ್ಮಠ ದ್ವಾರಬಾಗಿಲು ಮತ್ತು ಬಾವಿ ರೂ.1.54 ಕೋಟಿ ವೆಚ್ಚದಲ್ಲಿ ಅಭಿವೃದ್ಧಿ ನಡೆಯಲಿದೆ.

ಜಿಲ್ಲಾಧಿಕಾರಿ ಸಿ.ಎನ್. ಶ್ರೀಧರ್, ಜಿಲ್ಲಾ ಪೊಲೀಸ್ ವರಿಷ್ಠಾಧಿಕಾರಿ ರೋಹನ್ ಜಗದೀಶ್ ಸೇರಿದಂತೆ ಹಲವು ಅಧಿಕಾರಿಗಳು ಹಾಗೂ ಗಣ್ಯರು ಕಾರ್ಯಕ್ರಮದಲ್ಲಿ ಉಪಸ್ಥಿತರಿರಲಿದ್ದಾರೆ.

### ಮೂವರು ಬಿಜೆಪಿ ಸದಸ್ಯರ ಸದಸ್ಯತ್ವ ರದ್ದುಗೊಳಿಸಿದ್ದ ಹೈಕೋರ್ಟ್ ಏಕಸದಸ್ಯ ಪೀಠದ ಆದೇಶಕ್ಕೆ ದ್ವಿಸದಸ್ಯ ಪೀಠ ತಡೆ

# ಬಿಜೆಪಿ ಅಧಿಕಾರದ ಆಸೆ ಜೀವಂತ!

**■ವಿಜಯಸಾಕ್ಷಿ ಸುದ್ದಿ, ಗದಗ**

ಗದಗ-ಬೆಟಗೇರಿ ನಗರಸಭೆಯ ಮೂವರು ಬಿಜೆಪಿ ಸದಸ್ಯರಾದ ಮುತ್ತು ಮುಷಿಗೇರಿ, ಅನಿಲ ಅಬ್ಬಿಗೇರಿ ಹಾಗೂ ಉಷಾ ದಾಸರ ಅವರ ಸದಸ್ಯತ್ವ ರದ್ದುಗೊಳಿಸುವ ಕುರಿತು ಹೈಕೋರ್ಟ್ ಏಕಸದಸ್ಯ ಪೀಠ ನೀಡಿದ್ದ ಆದೇಶಕ್ಕೆ ಧಾರವಾಡದ ಹೈಕೋರ್ಟ್ ದ್ವಿಸದಸ್ಯ ಪೀಠ ಬುಧವಾರ ತಡೆಯಾಜ್ಞೆ ನೀಡಿದ್ದು, ಬಿಜೆಪಿ ಸದಸ್ಯರ ಅಧಿಕಾರದ ಆಸೆ ಮತ್ತೊಮ್ಮೆ ಜೀವಂತವಾಗಿದೆ.




ನಗರಸಭೆಯ ಮೂವರು ಬಿಜೆಪಿ ಸದಸ್ಯರ ಸದಸ್ಯತ್ವವನ್ನು ಅಮಾನತುಗೊಳಿಸಿ ಬೆಳಗಾವಿ ಪ್ರಾದೇಶಿಕ ಆಯುಕ್ತರು ನೀಡಿದ ಆದೇಶವನ್ನು ಹೈಕೋರ್ಟ್ ಏಕಸದಸ್ಯ ಪೀಠ ಕೆಲವು ತಿಂಗಳ ಹಿಂದೆ ಎತ್ತಿ ಹಿಡಿದಿತ್ತು. ಇದರ ಪರಿಣಾಮವಾಗಿ ಉಳಿದ ಅವಧಿಗೆ ಅಧ್ಯಕ್ಷ-ಉಪಾಧ್ಯಕ್ಷರ ಆಯ್ಕೆ ಪ್ರಕ್ರಿಯೆಗೆ ದಾರಿ ಸುಗಮಗೊಂಡಿತ್ತು.

ಈ ಆದೇಶವನ್ನು ಪ್ರಶ್ನಿಸಿ ಬಿಜೆಪಿ ಸದಸ್ಯರು ಧಾರವಾಡದ ಹೈಕೋರ್ಟ್ ದ್ವಿಸದಸ್ಯ ಪೀಠಕ್ಕೆ ಮೇಲ್ಮನವಿ ಸಲ್ಲಿಸಿದ್ದರು. ಸುದೀರ್ಘ ವಾದ-ವಿವಾದಗಳನ್ನು ಆಲಿಸಿದ ನ್ಯಾಯಮೂರ್ತಿಗಳಾದ ಬಿ.ಎಂ. ಶ್ಯಾಮಪ್ರಸಾದ್ ಹಾಗೂ ಶಿವಶಂಕರ ಅಮರಣ್ಣವರ ಅವರಿದ್ದ ಪೀಠ, ಏಕಸದಸ್ಯ ಪೀಠದ ಆದೇಶಕ್ಕೆ ತಡೆಯಾಜ್ಞೆ ನೀಡಿದೆ.

> "ನಗರಸಭೆ ಮೂವರು ಬಿಜೆಪಿ ಸದಸ್ಯರ ಅನರ್ಹತೆ ಪ್ರಶ್ನಿಸಿ ದ್ವಿಸದಸ್ಯ ಪೀಠದಲ್ಲಿ ಅರ್ಜಿ ಸಲ್ಲಿಸಲಾಗಿತ್ತು. ಎರಡು ತಿಂಗಳ ಕಾಲ ವಿಚಾರಣೆ ನಡೆಸಿ ಏಕಸದಸ್ಯ ಪೀಠದ ಆದೇಶಕ್ಕೆ ತಡೆ ನೀಡಲಾಗಿದೆ. ಕಾನೂನು ಹೋರಾಟದಲ್ಲಿ ಬಿಜೆಪಿಗೆ ಜಯವಾಗಿದ್ದು, ನಗರಸಭೆಯಲ್ಲಿ ಮತ್ತೆ ಅಧಿಕಾರಕ್ಕೆ ಬರುವ ವಿಶ್ವಾಸ ಮೂಡಿದೆ."
>
> – **ಚಂದ್ರು ತಡಸದ,** ನಗರಸಭೆ ಬಿಜೆಪಿ ಸದಸ್ಯ

ಇನ್ನೊಂದೆಡೆ, ಏಕಸದಸ್ಯ ಪೀಠದ ಆದೇಶದ ಹಿನ್ನೆಲೆ ಅಧ್ಯಕ್ಷ-ಉಪಾಧ್ಯಕ್ಷರ ಆಯ್ಕೆಗಾಗಿ 2026ರ ಮಾರ್ಚ್ 3ರಂದು ಚುನಾವಣೆ ನಿಗದಿಯಾಗಿತ್ತು. ಈ ಪ್ರಕ್ರಿಯೆಯನ್ನು ಪ್ರಶ್ನಿಸಿ ಬಿಜೆಪಿ ಸದಸ್ಯರು ಸುಪ್ರೀಂ ಕೋರ್ಟ್ ಮೆಟ್ಟಿಲೇರಿದ್ದು, ಅವರ ಮನವಿಯನ್ನು ಪುರಸ್ಕರಿಸಿದ ಸುಪ್ರೀಂ ಕೋರ್ಟ್ ಚುನಾವಣೆಗೆ ತಡೆ ನೀಡಿತ್ತು.

ಸದ್ಯ ಒಂದೆಡೆ ಸದಸ್ಯತ್ವ ರದ್ದು ಆದೇಶಕ್ಕೆ ತಡೆ ಸಿಕ್ಕಿದ್ದು, ಮತ್ತೊಂದೆಡೆ ಅಧ್ಯಕ್ಷ-ಉಪಾಧ್ಯಕ್ಷರ ಚುನಾವಣೆಯಿಗೂ ಸುಪ್ರೀಂ ಕೋರ್ಟ್ ತಡೆ ನೀಡಿರುವುದರಿಂದ ಬಿಜೆಪಿ ಸದಸ್ಯರಲ್ಲಿ ಅಧಿಕಾರದ ಭರವಸೆ ಮತ್ತಷ್ಟು ಗಟ್ಟಿಯಾಗಿದೆ. ಇದೆಲ್ಲದರ ಪ್ರಕ್ರಿಯೆಯ ಸಂಪೂರ್ಣ ಮಾಹಿತಿ ಧಾರವಾಡ ಹೈಕೋರ್ಟಿನ ದ್ವಿ ಸದಸ್ಯ ಪೀಠದ ಆದೇಶವು ಅಧಿಕೃತವಾಗಿ ಹೊರಬಂದ ನಂತರವೇ ಎಲ್ಲವೂ ಸ್ಪಷ್ಟಗೊಳ್ಳಲಿದೆ.

### ಚುನಾವಣಾಧಿಕಾರಿಯ ತಪ್ಪೊಪ್ಪಿಕೆ?

ಹೈಕೋರ್ಟ್ ಆದೇಶದ ನಡುವೆಯೂ 2025 ಫೆಬ್ರವರಿ 27ರಂದು ಗದಗ-ಬೆಟಗೇರಿ ನಗರಸಭೆಯ ಅಧ್ಯಕ್ಷ-ಉಪಾಧ್ಯಕ್ಷರ ಚುನಾವಣೆ ನಡೆಸಿದ್ದ ಹಿನ್ನೆಲೆಯಲ್ಲಿ ಚುನಾವಣಾಧಿಕಾರಿ ಗಂಗಪ್ಪ ಎಂ. ಅವರ ವಿರುದ್ಧ ನ್ಯಾಯಾಂಗ ನಿಂದನೆ ಪ್ರಕರಣ ದಾಖಲಾಗಿತ್ತು ಎನ್ನಲಾಗಿದೆ.

ಈ ಪ್ರಕರಣದ ವಿಚಾರಣೆ ನಡೆಯುತ್ತಿದ್ದಾಗಲೇ 2026ರ ಮಾರ್ಚ್ 3ರಂದು ಮತ್ತೆ ಚುನಾವಣೆ ನಿಗದಿಯಾಗಿತ್ತು. ಇದನ್ನು ಪ್ರಶ್ನಿಸಿ ಬಿಜೆಪಿ ಸದಸ್ಯರು ಸುಪ್ರೀಂ ಕೋರ್ಟ್‌ಗೆ ಮೊರೆ ಹೋಗಿದ್ದರು.

ವಿಚಾರಣೆ ನಡೆಸಿದ ನ್ಯಾಯಮೂರ್ತಿಗಳಾದ ವಿಕ್ರಮ ನಾಥ್ ಹಾಗೂ ಸಂದೀಪ್ ಮೆಹ್ತಾ ಅವರಿದ್ದ ಪೀಠ, ಮಾರ್ಚ್ 3ರಂದು ನಡೆಯಬೇಕಿದ್ದ ಚುನಾವಣೆಗೆ ತಡೆ ನೀಡಿತು. ಅಲ್ಲದೆ, ಮಾರ್ಚ್ 2ರಂದು ನ್ಯಾಯಾಂಗ ನಿಂದನೆ ಪ್ರಕರಣದ ವಿಚಾರಣೆಗೆ ದಿನಾಂಕ ನಿಗದಿಪಡಿಸಿತ್ತು.

ವಿಚಾರಣೆ ವೇಳೆ ಚುನಾವಣಾಧಿಕಾರಿ ಗಂಗಪ್ಪ ಎಂ. ಅವರು, "ಹೈಕೋರ್ಟ್ ಆದೇಶದ ಪ್ರತಿಯನ್ನು ತಡವಾಗಿ ಪಡೆದ ಹಿನ್ನೆಲೆಯಲ್ಲಿ ಚುನಾವಣಾ ಪ್ರಕ್ರಿಯೆ ನಡೆಸಬೇಕಾಯಿತು" ಎಂದು ತಪ್ಪೊಪ್ಪಿಕೊಂಡರು. ಇದರ ಆಧಾರದಲ್ಲಿ 2025 ಫೆಬ್ರವರಿ 27ರಂದು ನಡೆದ ಚುನಾವಣೆಯನ್ನು ಕೋರ್ಟ್ ರದ್ದುಗೊಳಿಸಿದೆ ಎನ್ನಲಾಗಿದೆ.

## ಫಕೀರೇಶ್ವರ ಜಾತ್ರೆ ಯಶಸ್ವಿಗೆ ಪೊಲೀಸ್ ಬಂದೋಬಸ್ತ್ : ಡಿಎಸ್‌ಪಿ ಖಾದ್ರಿ



**■ವಿಜಯಸಾಕ್ಷಿ ಸುದ್ದಿ, ಶಿರಹಟ್ಟಿ**

ಶಿರಹಟ್ಟಿ ಪಟ್ಟಣದಲ್ಲಿ ಮೇ 1ರಿಂದ ನಡೆಯಲಿರುವ ಕರ್ತೃ ಶ್ರೀ ಜ. ಫಕೀರೇಶ್ವರ ಜಾತ್ರಾ ಮಹೋತ್ಸವದ ಹಿನ್ನೆಲೆಯಲ್ಲಿ ಪೊಲೀಸ್ ಇಲಾಖೆ ಸಮಗ್ರ ಭದ್ರತಾ ಬಂದೋಬಸ್ತವನ್ನು ಕಲ್ಪಿಸಲು ಸಿದ್ಧತೆ ನಡೆಸಿದೆ. ಸಾರ್ವಜನಿಕರು, ಯುವಕರು ಹಾಗೂ ಸಂಘಟಕರು ಪೊಲೀಸ್ ಇಲಾಖೆಗೆ ಸಹಕಾರ ನೀಡಬೇಕು ಎಂದು ಗದಗ ಡಿಎಸ್‌ಪಿ ಮುರ್ತುಜಾ ಖಾದ್ರಿ ಮನವಿ ಮಾಡಿದರು.

ಬುಧವಾರ ಶಿರಹಟ್ಟಿಯ ಶ್ರೀ ಜ. ಫಕೀರೇಶ್ವರ ಮಠದಲ್ಲಿ ಜಾತ್ರಾ ಮಹೋತ್ಸವದ ಪೂರ್ವಭಾವಿ ಸಭೆಯಲ್ಲಿ ಮಾತನಾಡಿದ ಅವರು, ಹೆಚ್ಚಿನ ಸಂಖ್ಯೆಯಲ್ಲಿ ಭಕ್ತರು ಆಗಮಿಸುವ ನಿರೀಕ್ಷೆಯಿದ್ದು, ಶಾಂತಿ ಮತ್ತು ಸುವ್ಯವಸ್ಥೆ ಕಾಪಾಡಲು ವಿಶೇಷ ಕ್ರಮ ಕೈಗೊಳ್ಳಲಾಗುತ್ತದೆ ಎಂದರು.

2 ಕೆಎಸ್‌ಆರ್‌ಪಿ ಹಾಗೂ 2 ಡಿಎಆರ್ ತುಕಡಿಗಳೊಂದಿಗೆ ಜಿಲ್ಲೆಯ ವಿವಿಧ ಪೊಲೀಸ್ ಸಿಬ್ಬಂದಿಯನ್ನು ನಿಯೋಜಿಸಲಾಗುತ್ತದೆ. ಕಳ್ಳತನ ಪ್ರಕರಣಗಳನ್ನು ತಡೆಗಟ್ಟಲು ಪ್ರತ್ಯೇಕ ಕ್ರೈಂ ಪೊಲೀಸ್ ತಂಡ ಕಾರ್ಯನಿರ್ವಹಿಸಲಿದೆ. ಅಗತ್ಯ ಸ್ಥಳಗಳಲ್ಲಿ ಸಿಸಿ ಕ್ಯಾಮೆರಾಗಳನ್ನು ಅಳವಡಿಸಲಾಗುತ್ತದೆ.

▸▸ 3ನೇ ಪುಟಕ್ಕೆ

### 14 ಮನೆಕಳ್ಳತನ ಪ್ರಕರಣ ಪತ್ತೆ; ರೂ. 1.26 ಕೋಟಿ ಮೌಲ್ಯದ ಚಿನ್ನ-ಬೆಳ್ಳಿ, ವಾಹನ ವಶ

# 11 ಕಳ್ಳರ ಜಾಲ ಭೇದಿಸಿದ ಗದಗ ಪೊಲೀಸರು




**■ವಿಜಯಸಾಕ್ಷಿ ಸುದ್ದಿ, ಗದಗ**

ಗದಗ-ಬೆಟಗೇರಿ ಅವಳಿ ನಗರದಲ್ಲಿ ಸರಣಿ ಮನೆಕಳ್ಳತನ ನಡೆಸಿ ಸಾರ್ವಜನಿಕರಲ್ಲಿ ಭೀತಿ ಹುಟ್ಟಿಸಿದ್ದ ಕಳ್ಳರ ಜಾಲವನ್ನು ಜಿಲ್ಲಾ ಪೊಲೀಸರು ಭೇದಿಸಿದ್ದಾರೆ. ಒಟ್ಟು 14 ಮನೆಕಳ್ಳತನ ಪ್ರಕರಣಗಳಿಗೆ ಸಂಬಂಧಿಸಿದಂತೆ 11 ಆರೋಪಿಗಳನ್ನು ಬಂಧಿಸಿ, ರೂ. 1.26 ಕೋಟಿಗೂ ಅಧಿಕ

> "ಅತ್ಯಂತ ಕ್ಲಿಷ್ಟಕರವಾಗಿದ್ದ ಪ್ರಕರಣಗಳನ್ನು ಪೊಲೀಸರು ಜಾಣ್ಮೆಯಿಂದ ಬೇಧಿಸಿದ್ದು ಶ್ಲಾಘ ನೀಯ"
>
> – **ರೋಹನ ಜಗದೀಶ,** ಜಿಲ್ಲಾ ಪೊಲೀಸ್ ವರಿಷ್ಠಾಧಿಕಾರಿ.

ತಮ್ಮ ಕಚೇರಿಯಲ್ಲಿ ಸುದ್ದಿಗೋಷ್ಠಿ ನಡೆಸಿ ಮಾಹಿತಿ ನೀಡಿದರು.

ಕಳೆದ ಒಂದು ವರ್ಷದಲ್ಲಿ ಬೆಟಗೇರಿ ಬಡಾವಣೆ ಹಾಗೂ ಬೆಟಗೇರಿ

ಎಪ್ರಿಲ್ 1ರಂದು ಬೆಟಗೇರಿ ಬಡಾವಣೆ ಠಾಣೆ ವ್ಯಾಪ್ತಿಯಲ್ಲಿ ನಡೆದ ಕಳ್ಳತನ ಪ್ರಕರಣಕ್ಕೆ ಸಂಬಂಧಿಸಿದಂತೆ ಸುರೇಶ್ ಸಿಂಗನೂರ (ಕಾದ್ರೋಳಿ, ಬೆಳಗಾವಿ), ನಾಗಪ್ಪ ದುರಗಮುರಗಿ (ಅಳ್ನಾವರ, ಧಾರವಾಡ), ಶಿವು ಬೆಳಗಂಟಿ (ಗರಗ), ದೊಡ್ಡಸುರೇಶ್ ತಮ್ಮಣ್ಣವರ (ದಡ್ಡಿ, ಬೆಳಗಾವಿ), ಶಂಕರ ಕರಿ ಅಲಿಯಾಸ್ ಕುಡ್ಡ ಶಂಕರ (ವೆಂಕಟಾಪುರ, ಧಾರವಾಡ), ಮಂಜುನಾಥ ಬಾದಗಿ (ಧಾರವಾಡ), ಹುಲಗಪ್ಪ ಬೆಳಗಾಲಪೇಟೆ (ಹಾವೇರಿ) ಹಾಗೂ ಆನಂದ ಯರಗಣ್ಣವರ (ಮುನವಳ್ಳಿ, ಧಾರವಾಡ) ಬಂಧಿಸಲಾಗಿದೆ. ಬಂಧಿತರಿಂದ

587 ಗ್ರಾಂ ಚಿನ್ನಾಭರಣ ರೂ 9,22,400 ಹಾಗೂ 3822 ಗ್ರಾಂ ಬೆಳ್ಳಿ ರೂ 9,31,680,

ಕಳ್ಳತನಕ್ಕೆ ಬಳಸಿದ ಹಿರೋ ಹೊಂಡಾ, ಪಲ್ಸರ್ ಬೈಕ್, ಟಾಟಾ ಇಂಟ್ರಾ ಪಿಕಪ್ ಹಾಗೂ ಸ್ವಿಫ್ಟ್ ಕಾರು ವಶಪಡಿಸಿಕೊಳ್ಳಲಾಗಿದೆ.

▸▸ 3ನೇ ಪುಟಕ್ಕೆ

### ದಿಟ್ಟ ಕಾರ್ಯಾಚರಣೆ ನಾಲ್ಕು ತಂಡಗಳ ಸಾಧನೆ

ಡಿವೈಎಸ್‌ಪಿ ಮುರ್ತುಜಾ ಖಾದ್ರಿ ಮಾರ್ಗದರ್ಶನದಲ್ಲಿ ಸಿಪಿಐ ಧೀರಜ್ ಶಿಂಧೆ, ಪಿಎಸ್‌ಐಗಳಾದ ಮಾರುತಿ ಜೋಗದಂಡಕರ, ಲಕ್ಷ್ಮಪ್ಪ ಆರಿ ಹಾಗೂ ಸಿಬ್ಬಂದಿ ಸೇರಿ ನಾಲ್ಕು ತಂಡಗಳನ್ನು ರಚಿಸಿ ಕಾರ್ಯಾಚರಣೆ ನಡೆಸಲಾಗಿದೆ.

ಅತೀ ಕಡಿಮೆ ಅವಧಿಯಲ್ಲಿ ಕೋಟ್ಯಂತರ ಮೌಲ್ಯದ ಸ್ವತ್ತು ಪತ್ತೆಹಚ್ಚಿದ ಪೊಲೀಸ್ ತಂಡಕ್ಕೆ ಸೂಕ್ತ ಬಹುಮಾನ ನೀಡಲಾಗುವುದು ಎಂದು ಎಸ್ಪಿ ರೋಹನ ಜಗದೀಶ ತಿಳಿಸಿದ್ದಾರೆ.

### ಬಿಸಿಲಿನ ತಾಪಕ್ಕೆ ಹಗರಿಬೊಮ್ಮನಹಳ್ಳಿಯಲ್ಲಿ 'ಚುಟುಕು ಹಕ್ಕಿಗೆ ಬೊಗಸೆ ನೀರು' ಅಭಿಯಾನ

## "ಹಕ್ಕಿಗಳಿಗೆ ಆಹಾರ-ನೀರು ಒದಗಿಸುವುದು ನಮ್ಮ ಕರ್ತವ್ಯ"

**■ವಿಜಯಸಾಕ್ಷಿ ಸುದ್ದಿ, ಹಗರಿಬೊಮ್ಮನಹಳ್ಳಿ**

"ಬೇಸಿಗೆಯಲ್ಲಿ ಹಕ್ಕಿಗಳು ಆಹಾರ ಮತ್ತು ನೀರಿಗಾಗಿ ಪರದಾಡುತ್ತಿವೆ. ಅವುಗಳಿಗೆ ಕಾಳು ಮತ್ತು ನೀರು ಒದಗಿಸುವುದು ನಮ್ಮೆಲ್ಲರ ಕರ್ತವ್ಯ" ಎಂದು ತಾಲೂಕು ಪದವೀಧರ ಸಂಘದ ಅಧ್ಯಕ್ಷ ಎಚ್. ಜಂದಿಸಾಹೇಬ್ ಹೇಳಿದರು.




ಪಟ್ಟಣದ ಹಗರಿ ಆಂಜನೇಯ ದೇವಸ್ಥಾನದ ಆವರಣದಲ್ಲಿ ಸಂಘದ ವತಿಯಿಂದ ಹಮ್ಮಿಕೊಂಡಿದ್ದ 'ಚುಟುಕು ಹಕ್ಕಿಗೆ ಬೊಗಸೆ ನೀರು' ಕಾರ್ಯಕ್ರಮದಲ್ಲಿ ಅವರು ಮಾತನಾಡಿದರು.

ಈ ಯೋಜನೆಯಡಿ ಹಕ್ಕಿಗಳಿಗೆ ಆಹಾರ ಹಾಗೂ ನೀರು ಒದಗಿಸಲು ಸುಮಾರು 25ಕ್ಕೂ ಹೆಚ್ಚು ವಿಶೇಷ ಬಾಕ್ಸ್‌ಗಳನ್ನು ಸಿದ್ಧಪಡಿಸಲಾಗಿದ್ದು, ಅವುಗಳಲ್ಲಿ ನಾಲ್ಕು ಕಡೆಗಳಲ್ಲಿ ಕಾಳು ಮತ್ತು ಮಧ್ಯದಲ್ಲಿ ನೀರು ಇಡುವ ವ್ಯವಸ್ಥೆ ಮಾಡಲಾಗಿದೆ. ಈ ಬಾಕ್ಸ್‌ಗಳನ್ನು ಪಟ್ಟಣದ ವಿವಿಧ ಭಾಗಗಳಲ್ಲಿ ಗಿಡಮರಗಳಿಗೆ ಕಟ್ಟಿ ಹಕ್ಕಿಗಳಿಗೆ ಅನುಕೂಲ ಕಲ್ಪಿಸಲಾಗುತ್ತದೆ ಎಂದು ಅವರು ತಿಳಿಸಿದರು.

ಕಾರ್ಯಕ್ರಮದಲ್ಲಿ ಜಿ.ಪಂ. ಮಾಜಿ ಸದಸ್ಯ ಅಕ್ಕಿತೋಟೇಶ್ ಮಾತನಾಡಿ, ತೀವ್ರ ಬಿಸಿಲಿನ ಸಂದರ್ಭದಲ್ಲಿ ಹಕ್ಕಿಗಳಿಗೆ ನೆರವಾಗುವ ಈ ಕಾರ್ಯಕ್ರಮ ಸಮಾಜಕ್ಕೆ ಮಾದರಿಯಾಗಿದೆ ಎಂದು ಹೇಳಿದರು.

> "ಮೂಕ ಜೀವಿಗಳ ಉಳಿವಿಗಾಗಿ ಪ್ರತಿಯೊಬ್ಬರೂ
>
> **–ಎಚ್. ಜಂದಿಸಾಹೇಬ್,** ತಾಲೂಕು ಪದವೀಧರ ಸಂಘದ ಅಧ್ಯಕ್ಷ

ಮುಖಂಡರಾದ ಹಾಲ್ದಾಳ್ ವಿಜಯ, ಬಿ. ದಾದಾಪೀರ್, ಎಬಿಎಂ ಕುಮಾರ್, ಗಣೇಶ್ ಹವಾಲ್ದಾರ್, ಚಂದ್ರಾಮಪ್ಪ ಮಾನಾಡಿದರು, ಗದ್ದಲಗಟ್ಟಿ ಸೋಮಶೇಖರ, ಆಟೋ ರಾಜ, ಗುರುಬಸವರಾಜ, ಗುಂಡ್ರ ಹನುಮಂತಪ್ಪ, ನಿಸ್ಸಾರ್ ಅಹಮದ್, ಎಂ.ಎಂ. ಉಮಾಪತಿ ಸೇರಿದಂತೆ ಹಲವರು ಉಪಸ್ಥಿತರಿದ್ದರು.

### ಸಾವಿರಾರು ರೈತರು ತೂಕ ಬಾಕಿ- ಬೆಂಬಲ ಬೆಲೆ ಖರೀದಿ ಅವಧಿ ವಿಸ್ತರಣೆಗಾಗಿ ಲಿಂಗರಾಜ ಪಾಟೀಲ ಆಗ್ರಹ

# ಕಡಲೆ ಖರೀದಿ ಸ್ಥಗಿತಗೊಳಿಸಬೇಡಿ

**■ವಿಜಯಸಾಕ್ಷಿ ಸುದ್ದಿ, ಗದಗ**

ಬೆಂಬಲ ಬೆಲೆಯ ಕಡಲೆ ಖರೀದಿಯನ್ನು ಎಪ್ರಿಲ್ 30ರಿಂದ ಸ್ಥಗಿತಗೊಳಿಸುವ ನಿರ್ಧಾರ ರೈತರಲ್ಲಿ ಆತಂಕ ಮೂಡಿಸಿದ್ದು, ಖರೀದಿ ಪ್ರಕ್ರಿಯೆಯನ್ನು ಕನಿಷ್ಠ ಇನ್ನೊಂದು ತಿಂಗಳು ಮುಂದುವರಿಸಬೇಕು ಎಂದು ಬಿಜೆಪಿ ಜಿಲ್ಲಾ ಪ್ರಧಾನ ಕಾರ್ಯದರ್ಶಿ ಲಿಂಗರಾಜ ಪಾಟೀಲ ಆಗ್ರಹಿಸಿದ್ದಾರೆ.

ಪತ್ರಿಕಾ ಹೇಳಿಕೆ ನೀಡಿರುವ ಅವರು, ಹಿಂಗಾರು ಹಂಗಾಮಿನಲ್ಲಿ ಉತ್ತಮ ಮಳೆಯ ಪರಿಣಾಮ ಜಿಲ್ಲೆಯಲ್ಲಿ ಕಡಲೆ ಇಳುವರಿ ಹೆಚ್ಚಾಗಿದೆ. ಆದರೆ ಮಾರುಕಟ್ಟೆಯಲ್ಲಿ ಸ್ಪರ್ಧಾತ್ಮಕ ಬೆಲೆ ಸಿಗದ ಕಾರಣ ರೈತರು ಸರ್ಕಾರದ ಬೆಂಬಲ ಖರೀದಿ ಕೇಂದ್ರಗಳ ಮೇಲೆ ಅವಲಂಬಿತರಾಗಿದ್ದಾರೆ ಎಂದು ಹೇಳಿದರು.

ಜಿಲ್ಲೆಯಲ್ಲಿ ಒಟ್ಟು 19,133 ರೈತರು ನೋಂದಾಯಿಸಿಕೊಂಡಿದ್ದು, ಇದರಲ್ಲಿ 16,002 ರೈತರ 2,73,959 ಕ್ವಿಂಟಲ್ ಕಡಲೆ ಮಾತ್ರ ಖರೀದಿಯಾಗಿದೆ. ಇನ್ನೂ



3,131 ರೈತರ ಸುಮಾರು 60-70 ಸಾವಿರ ಕ್ವಿಂಟಲ್ ಕಡಲೆ ತೂಕವಾಗಬೇಕಿದೆ. ಇಂತಹ ಸಂದರ್ಭದಲ್ಲಿ ಖರೀದಿ ಸ್ಥಗಿತಗೊಳಿಸಿದರೆ ಹಲವು ತಿಂಗಳಿನಿಂದ ಕಾಯುತ್ತಿರುವ ರೈತರಿಗೆ ಅನ್ಯಾಯವಾಗುತ್ತದೆ ಎಂದು ಆತಂಕ ವ್ಯಕ್ತಪಡಿಸಿದರು.

ಜನವರಿ 31ರಂದು ಜಿಲ್ಲಾಧಿಕಾರಿಗಳ ಸಭೆಯಲ್ಲಿ ಜಿಲ್ಲೆಯ ವಿವಿಧ ತಾಲೂಕುಗಳಿಗೆ ಒಟ್ಟು 70 ಖರೀದಿ ಕೇಂದ್ರಗಳಿಗೆ ಅನುಮತಿ ನೀಡಲಾಗಿತ್ತು. ಆದರೆ ಖರೀದಿ ಪ್ರಕ್ರಿಯೆ ಫೆಬ್ರವರಿ ಮೂರನೇ ವಾರದಲ್ಲೇ ಆರಂಭವಾಗಿದ್ದು, ಚೀಲಗಳ ಸಮರ್ಪಕ ಪೂರೈಕೆ ಆಗದಿರುವುದು ಹಾಗೂ ಇಲಾಖೆಗಳ ನಿರ್ಲಕ್ಷ್ಯದಿಂದ ಸಮಸ್ಯೆಗಳು ಉಂಟಾಗಿವೆ ಎಂದು ಆರೋಪಿಸಿದರು.

> "ಕಡಲೆ ಕೊಯ್ದು ತಿಂಗಳಿನಿಂದ ಕಾಯುತ್ತಿರುವ ರೈತರಿಗೆ ಈ ಸಮಯದಲ್ಲಿ ಖರೀದಿ ನಿಲ್ಲಿಸಿದರೆ ನಷ್ಟಕ್ಕೆ ಯಾರು ಹೊಣೆ?"
>
> **– ಲಿಂಗರಾಜ ಪಾಟೀಲ,** ಬಿಜೆಪಿ ಜಿಲ್ಲಾ ಪ್ರಧಾನ ಕಾರ್ಯದರ್ಶಿ

ವಿಶೇಷವಾಗಿ ನರಗುಂದ, ರೋಣ, ಗಜೇಂದ್ರಗಡ ಭಾಗಗಳಲ್ಲಿ ಹೆಚ್ಚಿನ ಇಳುವರಿ ಬಂದಿದ್ದರೂ ಚೀಲಗಳ ಕೊರತೆ ತೀವ್ರವಾಗಿದ್ದು, ಖರೀದಿ ಕೇಂದ್ರಗಳಲ್ಲಿ 8-10 ದಿನಗಳ ಕಾಲ ಕಾಯುವ ಪರಿಸ್ಥಿತಿ ನಿರ್ಮಾಣವಾಗಿದೆ ಎಂದು ಹೇಳಿದರು.

ತಾಲೂಕುಗಳವಾರು ಸ್ಥಿತಿಯನ್ನು ವಿವರಿಸಿದ ಅವರು, ಮುಂಡರಗಿ, ಶಿರಹಟ್ಟಿ, ಲಕ್ಷ್ಮೇಶ್ವರ, ಗದಗ ಭಾಗದಲ್ಲಿ 9,214 ರೈತರ ಕಡಲೆ ಖರೀದಿ ಆಗಿದ್ದು, ಇನ್ನೂ 1,243 ರೈತರು ಬಾಕಿ, ನರಗುಂದ, ರೋಣ, ಗಜೇಂದ್ರಗಡ ಭಾಗದಲ್ಲಿ 6,788 ರೈತರ ಕಡಲೆ ಖರೀದಿ ಆಗಿದ್ದು, ಇನ್ನೂ 1,888 ರೈತರು ಬಾಕಿ ಉಳಿದಿದ್ದಾರೆ ಎಂದಿದ್ದಾರೆ.

ಹಲವಾರು ಖರೀದಿ ಕೇಂದ್ರಗಳಲ್ಲಿ ಇನ್ನೂ 30ರಿಂದ 400ರವರೆಗೆ ರೈತರು ಉಳಿದುಕೊಂಡಿದ್ದಾರೆ ಎಂದು ಹೇಳಿದರು.

ಖರೀದಿ ಸಂಸ್ಥೆ, ಕೃಷಿ ಮಾರಾಟ ಇಲಾಖೆ ಹಾಗೂ ಜಿಲ್ಲಾಡಳಿತದ ಸಮನ್ವಯದ ಕೊರತೆಯಿಂದ ಈ ಸಮಸ್ಯೆ ಉಂಟಾಗಿದೆ ಎಂದು ಆರೋಪಿಸಿದ ಅವರು, ರಾಜ್ಯ ಸರ್ಕಾರವು ಕೇಂದ್ರ ಸರ್ಕಾರಕ್ಕೆ ಪ್ರಸ್ತಾವನೆ ಸಲ್ಲಿಸಿ ತಕ್ಷಣವೇ ಖರೀದಿ ಅವಧಿಯನ್ನು ವಿಸ್ತರಿಸುವ ಕ್ರಮ ಕೈಗೊಳ್ಳಬೇಕು ಎಂದು ಒತ್ತಾಯಿಸಿದರು.

ರಾಷ್ಟ್ರ ಸೇವಿಕಾ ಸಮಿತಿ ಮೆರವಣಿಗೆಗೆ ಜನಮನ ಮೆಚ್ಚುಗೆ; ಪಟ್ಟಣದಲ್ಲಿ ದೇಶಭಕ್ತಿ ಚೈತನ್ಯ

# ಶಿಸ್ತು-ದೇಶಭಕ್ತಿಗೆ ಜೀವಂತ ಸಾಕ್ಷಿ



■ವಿಜಯಸಾಕ್ಷಿ ಸುದ್ದಿ, ಹಗರಿಬೊಮ್ಮನಹಳ್ಳಿ

ರಾಷ್ಟ್ರ ಸೇವಿಕಾ ಸಮಿತಿ ವಿಜಯನಗರ ಪ್ರಾಂತದ ವತಿಯಿಂದ ಗಣವೇಷಧಾರಿ ಸೇವಿಕೆಯರಿಂದ ಆಯೋಜಿಸಲಾದ ಭವ್ಯ ಪಥಸಂಚಲನ ಪಟ್ಟಣದಲ್ಲಿ ದೇಶಭಕ್ತಿ ಮತ್ತು ಶಿಸ್ತಿನ ಸ್ಫೂರ್ತಿಯನ್ನು ಮೂಡಿಸಿತು.

ಹಗರಿ ಆಂಜನೇಯ ದೇವಸ್ಥಾನದ ಮುಂಭಾಗದಿಂದ ಆರಂಭವಾದ ಪಥಸಂಚಲನವು ಪಟ್ಟಣದ ಪ್ರಮುಖ ಬೀದಿಗಳಲ್ಲಿ ಸಂಚರಿಸಿ ರಾಷ್ಟ್ರೋತ್ಥಾನ ಶಾಲೆಯಲ್ಲಿ ಸಮಾರೋಪಗೊಂಡಿತು. ಘೋಷ್ ವಾದ್ಯದ ನಾದದೊಂದಿಗೆ ಸಮಚಿತ್ತದ ಹೆಜ್ಜೆಯಲ್ಲಿ ಸಾಗಿದ ಸೇವಿಕೆಯರ ಮೆರವಣಿಗೆ ನೋಡುಗರ ಮೆಚ್ಚುಗೆಗೆ ಪಾತ್ರವಾಯಿತು.


ಗಣವೇಷಧಾರಿ ಸೇವಿಕೆಯರ ಶಿಸ್ತು, ಸಮನ್ವಯ, ಆತ್ಮವಿಶ್ವಾಸ ಹಾಗೂ ದೇಶಪ್ರೇಮ ಮೆರವಣಿಗೆಯೆಲ್ಲೆಡೆ ಗಮನಸೆಳೆಯುವಂತಿತ್ತು. ಮಾರ್ಗಮಧ್ಯೆ ಸಾರ್ವಜನಿಕರು ಹರ್ಷಧ್ವನಿಗಳೊಂದಿಗೆ ಪುಷ್ಪಾರ್ಚನೆ ಮಾಡಿ ಸ್ವಾಗತಿಸಿದರು.

ವಿದ್ಯಾರ್ಥಿನಿಯರು ಹಾಗೂ ಯುವತಿಯರ ಸಕ್ರಿಯ ಭಾಗವಹಿಸುವಿಕೆ ಕಾರ್ಯಕ್ರಮಕ್ಕೆ ವಿಶೇಷ ಕಳೆ ನೀಡಿತು. ಹದಿನೈದು ದಿನಗಳ ಕಾಲ ನಡೆದ ಶಿಕ್ಷಾವರ್ಗದ ಅಂಗವಾಗಿ ಸೇವಾಭಾವನೆ, ಶಿಸ್ತು ಹಾಗೂ ಸಮಾಜಸೇವೆಯ ಮನೋಭಾವ ಬೆಳೆಸುವ ಉದ್ದೇಶದಿಂದ ಈ ಪಥಸಂಚಲನ ಆಯೋಜಿಸಲಾಗಿತ್ತು.

ಈ ಸಂದರ್ಭದಲ್ಲಿ ಅಖಿಲ ಭಾರತೀಯ ಕಾರ್ಯವಾಹಿಕ ಮಾ. ಅಲಕಾ ಇನಾಮದಾರ, ಪ್ರವೇಶ ವರ್ಗದ ಅಧಿಕಾರಿ ಸರಸ್ವತಿ ಹೆಬ್ಬಾರ್, ವಿಶೇಷ ಅಧಿಕಾರಿ ರತ್ನಮಾಲಾ, ನಗರ ಕಾರ್ಯವಾಹಿಕ ಶ್ರೀಮತಿ ಚಿತ್ರ ರಂಗನಾಥ್, ರಾಷ್ಟ್ರೋತ್ಥಾನ ಪರಿಷತ್ತಿನ ಶ್ರೀಮತಿ ಪದ್ಮವಿಠ್ಠಲ್, ಬಿ. ಬಸವನಗೌಡ, ರಂಗನಾಥ್, ನಿವೃತ್ತ ಶಿಕ್ಷಕರಾದ ಸೋಮನಗೌಡ, ದಾನಯ್ಯ, ಕರಿಬಸಪ್ಪ, ಸಮಾಜಸೇವಕರಾದ ಶ್ರೀಶೈಲ, ವಾಚ್ ಶ್ರೀನಿವಾಸ, ಬೆಲ್ಲಂಕೊಂಡ ರಮೇಶ್ ಸೇರಿದಂತೆ ಅನೇಕರು ಉಪಸ್ಥಿತರಿದ್ದರು.

ಶಾಖದ ಒತ್ತಡದಿಂದ ಹಾಲಿನ ಉತ್ಪಾದನೆ ಕುಸಿತ–ಮುನ್ನೆಚ್ಚರಿಕೆ ಕ್ರಮಗಳೇ ಪರಿಹಾರ

# ಬೇಸಿಗೆಯಲ್ಲಿ ಜಾನುವಾರುಗಳ ಸಮರ್ಪಕ ನಿರ್ವಹಣೆ ಅತ್ಯಗತ್ಯ




ಬೇಸಿಗೆಯಲ್ಲಿ ಜಾನುವಾರುಗಳ (ದನ, ಎಮ್ಮೆ) ಸಮರ್ಪಕ ನಿರ್ವಹಣೆ ಅವುಗಳ ಆರೋಗ್ಯ ಹಾಗೂ ಹಾಲಿನ ಉತ್ಪಾದನೆಯನ್ನು ಕಾಯ್ದುಕೊಳ್ಳಲು ಅತ್ಯಂತ ಅಗತ್ಯವಾಗಿದೆ. ತೀವ್ರ ಬಿಸಿಲಿನಿಂದ ಪ್ರಾಣಿಗಳಲ್ಲಿ ಶಾಖದ ಒತ್ತಡ (ಊಜಚಿಣ ಖಣಡಿಜ) ಉಂಟಾಗಿ ಹಾಲಿನ ಇಳುವರಿ ಕುಸಿಯುವುದರ ಜೊತೆಗೆ ಆರೋಗ್ಯದ ಮೇಲೂ ಗಂಭೀರ ಪರಿಣಾಮ ಬೀರುತ್ತದೆ.

ಭಾರತದ ಆರ್ಥಿಕತೆಯಲ್ಲಿ ಜಾನುವಾರುಗಳ ಪಾತ್ರ ಮಹತ್ವದ್ದಾಗಿದೆ. ಹಾಲಿನ ಉತ್ಪಾದನೆಯಲ್ಲಿ ಭಾರತ ವಿಶ್ವದಲ್ಲೇ ಮೊದಲ ಸ್ಥಾನದಲ್ಲಿದ್ದು, ಜಾಗತಿಕ ಉತ್ಪಾದನೆಯಲ್ಲಿ ಸುಮಾರು ಶೇ. 26.76% ಪಾಲು ಹೊಂದಿದೆ. ವಿವಿಧ ತಳಿಗಳ ಜಾನುವಾರುಗಳ ಸಂಯೋಜನೆ ಹಾಗೂ ಡೈರಿ ಕ್ಷೇತ್ರದ ಬೆಳವಣಿಗೆ ಇದಕ್ಕೆ ಕಾರಣವಾಗಿದೆ.

ಪರಿಸರದ ತಾಪಮಾನ ಏರಿಕೆಯಿಂದ ಜಾನುವಾರುಗಳ ರೋಗನಿರೋಧಕ ಶಕ್ತಿ ಕುಂದುತ್ತದೆ. ಸಾಮಾನ್ಯವಾಗಿ 18–23ಲಿಅ ತಾಪಮಾನ ಜಾನುವಾರುಗಳಿಗೆ ಅನುಕೂಲಕರವಾಗಿದ್ದರೂ, ಬೇಸಿಗೆಯಲ್ಲಿ ಇದು 45ಲಿಅ ವರೆಗೆ ಏರಿಕೆಯಾಗುವುದರಿಂದ ತೀವ್ರ ಸಮಸ್ಯೆಗಳು ಉಂಟಾಗುತ್ತವೆ.

–ಕಲ್ಲಯ್ಯ ವಿ. ಗಾಳಪೂಜಿಮಠ
ಕಿರಿಯ ಪಶುವೈದ್ಯಕೀಯ ಪರೀಕ್ಷಕ
ಪ್ರಾಥಮಿಕ ಪಶು ಚಿಕಿತ್ಸಾ ಕೇಂದ್ರ, ಇಟಗಿ

### ಸಾಮಾನ್ಯವಾಗಿ ಕಂಡುಬರುವ ಸಮಸ್ಯೆಗಳು

1. ನಿರ್ಜಲೀಕರಣ: ದೇಹದಲ್ಲಿ ನೀರಿನ ಕೊರತೆ, ಕಣ್ಣು ಕುಳಿತಂತೆ ಕಾಣುವುದು
2. ಅತಿಸಾರ/ಬೇದಿ: ಕಲುಷಿತ ನೀರು ಅಥವಾ ಬಿಸಿಲಿನ ಪರಿಣಾಮ
3. ಟ್ರಿಪನೊಸೋಮಿಯಾಸಿಸ್ (Trypanosomiaşi): ಕುರುಡು ನೊಣಗಳಿಂದ ಹರಡುವ ರೋಗ
4. ಉಷ್ಣಾಘಾತ (Heat Stroke): ಉಸಿರಾಟ ತೊಂದರೆ, ಗಂಭೀರ ಸ್ಥಿತಿಯಲ್ಲಿ ಸಾವು
5. ಚರ್ಮದ ಕಾಯಿಲೆಗಳು: ಉಣ್ಣೆ, ಹೇನುಗಳ ಹೆಚ್ಚಳ
6. ಕುಂದು ರೋಗ (ಮೂರು ದಿನಗಳ ಜ್ವರ)
7. ನಿರ್ವಹಣೆಗೆ ಪ್ರಮುಖ ಸಲಹೆಗಳು

### ವಸತಿ ಮತ್ತು ನೆರಳು

1. ಶೆಡ್‌ಗಳಲ್ಲಿ ಉತ್ತಮ ಗಾಳಿ ಸಂಚಾರ ಇರಲಿ
2. ಛಾವಣಿಯ ಮೇಲೆ 4–6 ಇಂಚು ಒಣ ಹುಲ್ಲು/ತೆಂಗಿನ ಗರಿ ಹಾಕಿ ಶಾಖ ತಡೆ
3. ನೀರಿನ ವ್ಯವಸ್ಥೆ
4. 24 ಗಂಟೆಗಳೂ ಶುದ್ಧ, ತಂಪಾದ ನೀರು ಲಭ್ಯವಿರಲಿ
5. ಸಾಧ್ಯವಿಲ್ಲದಿದ್ದರೆ ದಿನಕ್ಕೆ 2–3 ಬಾರಿ ನೀರು ಕುಡಿಸಿ

### ಆಹಾರ ಮತ್ತು ಪೋಷಣೆ

ಸುಲಭವಾಗಿ ಜೀರ್ಣವಾಗುವಗುಣಮಟ್ಟದ ಆಹಾರ ನೀಡಬೇಕು
ಬೆಳಿಗ್ಗೆ ಮತ್ತು ಸಂಜೆ ಮಾತ್ರ ಮೇವು ನೀಡುವುದು ಉತ್ತಮ
ಮಿಶ್ರಣ ಆಹಾರ (Total Mixed Ration) ಬಳಕೆ
ಶೆಡ್ ಸುತ್ತಮುತ್ತ ಗಿಡಮರ ನೆಡುವುದು

### ಆರ್ಥಿಕ ನಷ್ಟ ತಪ್ಪಿಸಲು ಕ್ರಮ ಅಗತ್ಯ

ಶಾಖದ ಒತ್ತಡವು ಪ್ರಾಣಿಗಳ ದೇಹಶಾಸ್ತ್ರ ಮತ್ತು ಉತ್ಪಾದನಾ ಸಾಮರ್ಥ್ಯವನ್ನು ಹಾನಿಗೊಳಿಸಿ ರೈತರಿಗೆ ಆರ್ಥಿಕ ನಷ್ಟ ಉಂಟುಮಾಡುತ್ತದೆ. ಆದ್ದರಿಂದ ಮೇಲ್ಕಂಡ ಕ್ರಮಗಳನ್ನು ಅನುಸರಿಸುವುದು ಅತ್ಯಗತ್ಯವಾಗಿದೆ.

### ವಸತಿ ಮತ್ತು ನೆರಳು

1. ಶೆಡ್‌ಗಳಲ್ಲಿ ಉತ್ತಮ ಗಾಳಿ ಸಂಚಾರ ಇರಲಿ
2. ಛಾವಣಿಯ ಮೇಲೆ 4–6 ಇಂಚು ಒಣ ಹುಲ್ಲು/ತೆಂಗಿನ ಗರಿ ಹಾಕಿ ಶಾಖ ತಡೆ
3. ನೀರಿನ ವ್ಯವಸ್ಥೆ
4. 24 ಗಂಟೆಗಳೂ ಶುದ್ಧ, ತಂಪಾದ ನೀರು ಲಭ್ಯವಿರಲಿ
5. ಸಾಧ್ಯವಿಲ್ಲದಿದ್ದರೆ ದಿನಕ್ಕೆ 2–3 ಬಾರಿ ನೀರು ಕುಡಿಸಿ

# ತೀವ್ರ ಬಿಸಿಲಿನ ನಡುವೆ ನೌಕರರಿಗೆ ಕೆಲಸದ ಅವಧಿ ಕಡಿತ ಅಗತ್ಯ!

ಉತ್ತರ ಕರ್ನಾಟಕದಲ್ಲಿ ಹೆಚ್ಚಿದ ಉಷ್ಣಾಂಶ ಹಿನ್ನೆಲೆ ಸರ್ಕಾರಕ್ಕೆ ಒಕ್ಕೂಟದ ಮನವಿ



■ವಿಜಯಸಾಕ್ಷಿ ಸುದ್ದಿ, ಗದಗ

ಉತ್ತರ ಕರ್ನಾಟಕದ ವಿವಿಧ ಜಿಲ್ಲೆಗಳಲ್ಲಿ ಕಳೆದ ಕೆಲವು ದಿನಗಳಿಂದ ತಾಪಮಾನ 40ಲಿಅ ರಿಂದ 45ಲಿಅ ವರೆಗೆ ಏರಿಕೆಯಾಗಿದ್ದು, ಜನಜೀವನ ಅಸ್ತವ್ಯಸ್ತಗೊಂಡಿದೆ. ಈ ಹಿನ್ನೆಲೆಯಲ್ಲಿ ಸರ್ಕಾರಿ ಹಾಗೂ ಖಾಸಗಿ ವಲಯದ ನೌಕರರ ಕೆಲಸದ ಅವಧಿಯನ್ನು ಕಡಿತಗೊಳಿಸಲು ಉತ್ತರ ಕರ್ನಾಟಕ ಪದವೀಧರರ ಒಕ್ಕೂಟ ಆಗ್ರಹಿಸಿದೆ.

ಒಕ್ಕೂಟದ ರಾಜ್ಯಾಧ್ಯಕ್ಷ ಎಂ.ಎಸ್. ನಾಗರಕಟ್ಟಿ ಸರ್ಕಾರಕ್ಕೆ ಮನವಿ ಸಲ್ಲಿಸಿ, ತೀವ್ರ ಬಿಸಿಲಿನಿಂದ ರಕ್ಷಣೆಗಾಗಿ ಕಚೇರಿಗಳ ಕೆಲಸದ ಅವಧಿಯನ್ನು ಬೆಳಿಗ್ಗೆ 8:00 ರಿಂದ ಮಧ್ಯಾಹ್ನ 1:30ರವರೆಗೆ ಸೀಮಿತಗೊಳಿಸಬೇಕು ಎಂದು ತಿಳಿಸಿದ್ದಾರೆ.

ವಿದ್ಯುತ್ ಲೈನ್‌ಮನ್‌ಗಳು, ಪೊಲೀಸ್ ಸಿಬ್ಬಂದಿ ಹಾಗೂ ಕಟ್ಟಡ ಕಾರ್ಮಿಕರು ಮಧ್ಯಾಹ್ನ 12:00 ರಿಂದ ಸಂಜೆ 4:00ರವರೆಗೆ ನೇರ ಬಿಸಿಲಿನಲ್ಲಿ ಕೆಲಸ ಮಾಡುವುದರಿಂದ ವಿನಾಯಿತಿ ನೀಡಬೇಕು. ಕೆಲಸದ ಸ್ಥಳಗಳಲ್ಲಿ ತಂಪಾದ ಕುಡಿಯುವ ನೀರು, ನೆರಳು ವ್ಯವಸ್ಥೆ ಹಾಗೂ ತುರ್ತು ಚಿಕಿತ್ಸೆಗಾಗಿ ಓಆರ್‌ಎಸ್ ಪ್ಯಾಕೆಟ್‌ಗಳನ್ನು ಒದಗಿಸಬೇಕು ಎಂದು ಒತ್ತಾಯಿಸಿದ್ದಾರೆ.

ಖಾಸಗಿ ಸಂಸ್ಥೆಗಳು ಮಾನವೀಯ ದೃಷ್ಟಿಯಿಂದ 'ವರ್ಕ್ ಫ್ರಮ್ ಹೋಮ್' ಅಥವಾ ಶಿಫ್ಟ್ ಆಧಾರಿತ ಕೆಲಸದ ವ್ಯವಸ್ಥೆ ಕಲ್ಪಿಸಿ ನೌಕರರ ಆರೋಗ್ಯ ಕಾಪಾಡಬೇಕು ಎಂದು ಮನವಿ ಮಾಡಿದ್ದಾರೆ.

ಅತಿಯಾದ ಉಷ್ಣಾಂಶದಿಂದ ನಿರ್ಜಲೀಕರಣ ಹಾಗೂ ಲೂ ಹೊಡೆತ ಪ್ರಕರಣಗಳು ಹೆಚ್ಚಾಗುತ್ತಿರುವುದರಿಂದ ಸರ್ಕಾರ ತಕ್ಷಣ ಕ್ರಮ ಕೈಗೊಳ್ಳಬೇಕು. ವಿಶೇಷವಾಗಿ ಗದಗ ಜಿಲ್ಲೆಯಲ್ಲಿ ಕೆಲಸದ ಅವಧಿ ಬದಲಾಯಿಸಲು ಜಿಲ್ಲಾಧಿಕಾರಿಗಳು ಮುಂದಾಗ'ಬೇಕು ಎಂದು ಒಕ್ಕೂಟದ ಪರವಾಗಿ ಆಗ್ರಹಿಸಲಾಗಿದೆ.

# ಅರ್ಜಿ ಆಹ್ವಾನ

■ವಿಜಯಸಾಕ್ಷಿ ಸುದ್ದಿ, ಗದಗ

ಮೈಸೂರಿನ ಜೆಎಸ್‌ಎಸ್ ವಿಶೇಷ ಚೇತನರ ಪಾಲಿಟೆಕ್ನಿಕ್ ವತಿಯಿಂದ 2026–27ನೇ ಸಾಲಿನ ಮೂರು ವರ್ಷದ ಡಿಪ್ಲೋಮಾ ಕೋರ್ಸ್‌ಗಳಿಗೆ ವಿಶೇಷ ಚೇತನ ವಿದ್ಯಾರ್ಥಿ/ವಿದ್ಯಾರ್ಥಿನಿಯರಿಂದ (ಅಖಿಲ ಭಾರತ ಮಟ್ಟದಲ್ಲಿ) ಅರ್ಜಿಗಳನ್ನು ಆಹ್ವಾನಿಸಲಾಗಿದೆ.

ಅನುದಾನಿತ ಕೋರ್ಸ್‌ಗಳು ಅರ್ಕಿಟೆಕ್ಚರ್ ಅಸಿಸ್ಟಂಟ್‌ಶಿಪ್, ಕಮರ್ಷಿಯಲ್ ಪ್ರಾಕ್ಟೀಸ್, ಕಂಪ್ಯೂಟರ್ ಸೈನ್ಸ್ ಮತ್ತು ಇಂಜಿನಿಯರಿಂಗ್. ಅನುದಾನರಹಿತ ಕೋರ್ಸ್‌ಗಳು ಜ್ಯುವೆಲರಿ ಡಿಸೈನ್ ಮತ್ತು ಟೆಕ್ನಾಲಜಿ, ಎಲೆಕ್ಟ್ರಾನಿಕ್ಸ್ ಮತ್ತು ಕಮ್ಯುನಿಕೇಷನ್ ಇಂಜಿನಿಯರಿಂಗ್, ಕಂಪ್ಯೂಟರ್ ಅಪ್ಲಿಕೇಶನ್ (ದೃಷ್ಟಿಹೀನರಿಗೆ), ಅಪಾರೇಲ್ ಡಿಸೈನ್ ಮತ್ತು ಫ್ಯಾಬ್ರಿಕೇಷನ್ ಟೆಕ್ನಾಲಜಿ, ಎಲೆಕ್ಟ್ರಿಕಲ್ ಇಂಜಿನಿಯರಿಂಗ್ ಹಾಗೂ ಎಲೆಕ್ಟ್ರಿಕ್ ವೆಹಿಕಲ್ ಟೆಕ್ನಾಲಜಿ.

ಅರ್ಹ ವಿದ್ಯಾರ್ಥಿಗಳಿಗೆ ರಾಜ್ಯ ಹಾಗೂ ರಾಷ್ಟ್ರಮಟ್ಟದ ವಿದ್ಯಾರ್ಥಿವೇತನ ಸೌಲಭ್ಯ ಲಭ್ಯವಿದ್ದು, ತರಬೇತಿ ಮತ್ತು ಉದ್ಯೋಗ ಕೇಂದ್ರದ ಮೂಲಕ ಉದ್ಯೋಗಾವಕಾಶಗಳನ್ನು ಕಲ್ಪಿಸಲಾಗುತ್ತದೆ. ವಿದ್ಯಾರ್ಥಿ–ವಿದ್ಯಾರ್ಥಿನಿಯರಿಗೆ ಪ್ರತ್ಯೇಕ ವಸತಿ ವ್ಯವಸ್ಥೆಯೂ ಇದೆ.

ಅರ್ಜಿ ಸಲ್ಲಿಸಲು ಜೂನ್ 5, 2026 ಕೊನೆಯ ದಿನವಾಗಿದೆ. ಹೆಚ್ಚಿನ ಮಾಹಿತಿಗೆ ವೆಬ್‌ಸೈಟ್: www.jsspda.org, ಮೊಬೈಲ್: 98446 44937 ಅಥವಾ ದೂರವಾಣಿ: 0821–2548315/16 ಅನ್ನು ಸಂಪರ್ಕಿಸಬಹುದು.

ಆನ್‌ಲೈನ್ ಮೂಲಕ ಐಟಿಐ ಪ್ರವೇಶಕ್ಕೆ ಅರ್ಜಿ ಆಹ್ವಾನ

# ಮೇ 8ರ ವರೆಗೆ ಅರ್ಜಿ ಸಲ್ಲಿಕೆ ಮಹಿಳಾ ಅಭ್ಯರ್ಥಿಗಳಿಗೆ ಶುಲ್ಕ ವಿನಾಯಿತಿ

■ವಿಜಯಸಾಕ್ಷಿ ಸುದ್ದಿ, ಗದಗ

ರಾಜ್ಯದ ಸರ್ಕಾರಿ ಹಾಗೂ ಅನುದಾನಿತ ಕೈಗಾರಿಕಾ ತರಬೇತಿ ಸಂಸ್ಥೆಗಳಿಗೆ ಆಗಸ್ಟ್–2026ನೇ ಸಾಲಿಗೆ ಮೆರಿಟ್–ಕಂ–ರಿಸರ್ವೇಶನ್ ಆಧಾರಿತ ಪ್ರವೇಶಗಳನ್ನು ಆನ್‌ಲೈನ್ ಮುಖಾಂತರ ನೀಡಲಾಗುತ್ತಿದೆ.

ಪ್ರವೇಶ ಪಡೆಯಲು ಕನಿಷ್ಠ 14 ವರ್ಷ ವಯೋಮಿತಿ ಕಡ್ಡಾಯವಾಗಿದೆ. ವೃತ್ತಿಯ ಅನುಸಾರ ಎಸ್.ಎಸ್.ಎಲ್.ಸಿ ಉತ್ತೀರ್ಣರಾದ ಅರ್ಹ ಅಭ್ಯರ್ಥಿಗಳು ಎನ್‌ಸಿವಿಟಿ (NCVT) ಸಂಯೋಜಿತ ಸಿ.ಟಿ.ಎಸ್ (CTS) ಯೋಜನೆಯಡಿ ಇಂಜಿನಿಯರಿಂಗ್ ಹಾಗೂ ನಾನ್–ಇಂಜಿನಿಯರಿಂಗ್ ವೃತ್ತಿಗಳಿಗೆ ರಾಜ್ಯದ ಯಾವುದೇ ಭಾಗದಿಂದ ಇಲಾಖೆಯ ವೆಬ್‌ಸೈಟ್ www.cite.karnataka.gov.in ಮೂಲಕ ಅಥವಾ ಐಟಿಐಗಳಲ್ಲಿ ಇರುವ ಹೆಲ್ಪ್‌ಡೆಸ್ಕ್ ಮುಖಾಂತರ 27–04–2026 ರಿಂದ 08–05–2026ರವರೆಗೆ ಅರ್ಜಿ ಸಲ್ಲಿಸಬಹುದು.

2026ನೇ ಸಾಲಿಗೆ ಮಹಿಳಾ ಅಭ್ಯರ್ಥಿಗಳಿಗೆ ಸರ್ಕಾರಿ ಐಟಿಐಗಳಲ್ಲಿ ವಾರ್ಷಿಕ ಬೋಧನಾ ಶುಲ್ಕ ರೂ.1200/– ವಿನಾಯಿತಿ (ಪ್ರವೇಶ ಉಚಿತ) ನೀಡಲಾಗಿದೆ. ಗದಗ ಜಿಲ್ಲೆಯಲ್ಲಿ ಒಟ್ಟು 9 ಸರ್ಕಾರಿ ಹಾಗೂ 7 ಅನುದಾನಿತ ಕೈಗಾರಿಕಾ ತರಬೇತಿ ಸಂಸ್ಥೆಗಳಲ್ಲಿ ಪ್ರವೇಶ ಲಭ್ಯವಿದೆ.

**ಜಿಲ್ಲೆಯ ಸರ್ಕಾರಿ ಐಟಿಐಗಳು:**

ಸರಕಾರಿ ಐಟಿಐ (ಮಹಿಳಾ) ಬೆಟಗೇರಿ–ಗದಗ, ಮುಂಡರಗಿ, ನರಗುಂದ, ಶಿರಹಟ್ಟಿ, ಸೂಡಿ (ತಾ. ಗಜೇಂದ್ರಗಡ), ಹೊಂಬಳ (ತಾ. ಗದಗ), ಸೊರಟೂರ (ತಾ. ಗದಗ), ಕುರ್ತಕೋಟಿ (ತಾ. ಗದಗ), ಯಾವಗಲ್ (ತಾ. ರೋಣ)

**ಅನುದಾನಿತ ಐಟಿಐಗಳು:**

ಸರ್ ಸಿದ್ದಪ್ಪ ಕಂಬಳಿ ಖಾಸಗಿ ಐಟಿಐ (ಗದಗ), ಜಗದ್ಗುರು ತೋಟದಾರ್ಯ ಐಟಿಐ (ಡಂಬಳ), ಬಾಪೂಜಿ ಐಟಿಐ (ಲಕ್ಷ್ಮೇಶ್ವರ), ಸಂಜಯ ಗ್ರಾಮೀಣ ವಿದ್ಯಾ ಸಂಸ್ಥೆ ಐಟಿಐ (ಹೊಳೆ–ಆಲೂರ), ಶ್ರೀ ಜಗದ್ಗುರು ಅನ್ನದಾನೇಶ್ವರ ಐಟಿಐ (ಗಜೇಂದ್ರಗಡ), ಶ್ರೀ ಕೊಟ್ಟೂರ ಸ್ವಾಮಿ ಐಟಿಐ (ನರೇಗಲ್ಲ), ಶ್ರೀ ಮಾದಾರ ಚನ್ನಯ್ಯ ಐಟಿಐ (ಶಿರೋಳ)

ಹೆಚ್ಚಿನ ಮಾಹಿತಿಗಾಗಿ ಸಂಬಂಧಿಸಿದ ಐಟಿಐಗಳ ಪ್ರಾಚಾರ್ಯರನ್ನು ಅಥವಾ ಇಲಾಖೆಯ ವೆಬ್‌ಸೈಟ್ ಸಂಪರ್ಕಿಸಬಹುದಾಗಿದೆ ಎಂದು ಕೆ.ಎಚ್. ಪಾಟೀಲ ಸರ್ಕಾರಿ ಐಟಿಐ ಗದಗದ ಪ್ರಾಚಾರ್ಯ ಹಾಗೂ ನೋಡಲ್ ಅಧಿಕಾರಿ ಡಾ. ಮಲ್ಲೂರ ಬಸವರಾಜ ಪ್ರಕಟಣೆಯಲ್ಲಿ ತಿಳಿಸಿದ್ದಾರೆ.

ಪಂಚ ಗ್ಯಾರಂಟಿ ಯೋಜನೆಗಳ ಪ್ರಗತಿ ಪರಿಶೀಲನೆ – ಗುರಿ ಸಾಧನೆಗೆ ಅಧಿಕಾರಿಗಳಿಗೆ ಸೂಚನೆ

# ಎಲ್ಲರಿಗೂ ಗ್ಯಾರಂಟಿ ಯೋಜನೆ ತಲುಪಲಿ




■ವಿಜಯಸಾಕ್ಷಿ ಸುದ್ದಿ, ಗಜೇಂದ್ರಗಡ

ಸರ್ಕಾರದ ಮಹತ್ವಾಕಾಂಕ್ಷೆಯ ಪಂಚ ಗ್ಯಾರಂಟಿ ಯೋಜನೆಗಳು ಗ್ರಾಮೀಣ ಪ್ರದೇಶದ ಕಟ್ಟಕಡೆಯ ವ್ಯಕ್ತಿಗೂ ತಲುಪಬೇಕು. ಈ ನಿಟ್ಟಿನಲ್ಲಿ ಸಂಬಂಧಿಸಿದ ಇಲಾಖೆಯ ಅಧಿಕಾರಿಗಳು ಹಾಗೂ ಸದಸ್ಯರು ಸಮನ್ವಯದಿಂದ ಕಾರ್ಯನಿರ್ವಹಿಸಬೇಕು ಎಂದು ಗ್ಯಾರಂಟಿ ಸಮಿತಿ ತಾಲೂಕು ಅಧ್ಯಕ್ಷ ಶರಣಪ್ಪ ಬೆಟಗೇರಿ ಹೇಳಿದರು.

ಪಟ್ಟಣದ ತಾಲೂಕು ಪಂಚಾಯತ್ ಚಿಂತನಾ ಸಭಾಂಗಣದಲ್ಲಿ ಅವರ ಅಧ್ಯಕ್ಷತೆಯಲ್ಲಿ ನಡೆದ ಪಂಚ ಗ್ಯಾರಂಟಿ ಯೋಜನೆಗಳ ತಾಲೂಕು ಮಟ್ಟದ ಪ್ರಗತಿ ಪರಿಶೀಲನಾ ಸಭೆಯಲ್ಲಿ ಅವರು ಮಾತನಾಡಿದರು.

ಸಭೆಯಲ್ಲಿ ಗ್ಯಾರಂಟಿ ಯೋಜನೆಗಳಿಗೆ ಸಂಬಂಧಿಸಿದ ಐದು ಇಲಾಖೆಗಳ ಅಧಿಕಾರಿಗಳಿಂದ ತಾಲೂಕಿನ ಪ್ರಗತಿ ಮಾಹಿತಿ ಪಡೆಯಲಾಗಿದ್ದು, ಯೋಜನೆಗಳ ಗುರಿ ಸಾಧಿಸಲು ಅಗತ್ಯ ಕ್ರಮಗಳನ್ನು ಕೈಗೊಳ್ಳುವಂತೆ ಸೂಚಿಸಲಾಯಿತು.

ಈಗಾಗಲೇ ಅನೇಕರು ಗ್ಯಾರಂಟಿ ಯೋಜನೆಗಳ ಸೌಲಭ್ಯಗಳನ್ನು ಪಡೆಯುತ್ತಿದ್ದು, ಇನ್ನೂ ಕೆಲವರಿಗೆ ಮಾಹಿತಿ ಕೊರತೆಯಿಂದ ಸೌಲಭ್ಯ ತಲುಪಿಲ್ಲ. ಅಂತಹವರಿಗೆ ಜಾಗೃತಿ ಮೂಡಿಸಿ ಯೋಜನೆಗಳನ್ನು ತಲುಪಿಸುವಂತೆ ತಿಳಿಸಿದರು.

ಈ ಸಂದರ್ಭದಲ್ಲಿ ಗ್ಯಾರಂಟಿ ಸಮಿತಿಯ ಸರ್ವ ಸದಸ್ಯರು, ತಾಲೂಕು ಪಂಚಾಯತ್ ಕಾರ್ಯನಿರ್ವಾಹಕ ಅಧಿಕಾರಿ, ಪಂಚಾಯತ್ ರಾಜ್ ಸಹಾಯಕ ನಿರ್ದೇಶಕರು ಹಾಗೂ ಪಂಚ ಗ್ಯಾರಂಟಿ ಯೋಜನೆಗಳ ಅನುಷ್ಠಾನ ಅಧಿಕಾರಿಗಳು ಉಪಸ್ಥಿತರಿದ್ದರು.

ಶಿರಹಟ್ಟಿಯ ಫಕ್ಕೀರೇಶ್ವರ ಮಠ ಜಾತ್ರೆ ಹಿನ್ನಲೆ ಲಕ್ಷ್ಮೇಶ್ವರದಲ್ಲಿ ವರ್ಷಾಸನೆ ಸಂಪ್ರದಾಯ

# ಭಾವೈಕ್ಯತೆಯ ಸಂಕೇತವಾಗಿ ಜಗದ್ಗುರುಗಳ ಮೆರವಣಿಗೆ



■ವಿಜಯಸಾಕ್ಷಿ ಸುದ್ದಿ, ಲಕ್ಷ್ಮೇಶ್ವರ

ಪ್ರತಿವರ್ಷದಂತೆ ಆಗಿ ಹುಣ್ಣಿಮೆ ಸಂದರ್ಭದಲ್ಲಿ ನಡೆಯುವ ಶಿರಹಟ್ಟಿಯ ಶ್ರೀ ಫಕ್ಕೀರೇಶ್ವರ ಮಠದ ಜಾತ್ರಾಮಹೋತ್ಸವದ ಅಂಗವಾಗಿ, ಈ ವರ್ಷ ಮೇ 1 ಮತ್ತು 2ರಂದು ಜರುಗಲಿರುವ ಜಾತ್ರೆ ಹಿನ್ನಲೆಯಲ್ಲಿ ಶಿರಹಟ್ಟಿಯ 13ನೇ ಪೀಠಾಧ್ಯಕ್ಷರಾದ ಶ್ರೀ ಫಕೀರ ಸಿದ್ಧರಾಮ ಜಗದ್ಗುರುಗಳು ಸೋಮವಾರ ಲಕ್ಷ್ಮೇಶ್ವರದಲ್ಲಿ ವರ್ಷಾಸನೆ ಸಂಪ್ರದಾಯ ನೆರವೇರಿಸಿದರು.

ಈ ಸಂದರ್ಭದಲ್ಲಿ ಪಟ್ಟಣದಲ್ಲಿರುವ ಶ್ರೀ ಫಕ್ಕೀರೇಶ್ವರ ಮಠದಿಂದ ಶ್ರೀ ಸೋಮೇಶ್ವರ ದೇವಸ್ಥಾನ ಹಾಗೂ ದೂದಪೀರಾನ್ ದರ್ಗಾಗೆ ಭೇಟಿ ನೀಡಿದರು. ಪ್ರಮುಖ ಬೀದಿಗಳಲ್ಲಿ ಮೆರವಣಿಗೆ ಸಾಗಿದ ವೇಳೆ ಭಕ್ತರು ಕಾಣಿಕೆ ನೀಡಿ ಶ್ರೀಗಳ ಆಶೀರ್ವಾದ ಪಡೆದು ಜಗದ್ಗುರುಗಳಿಗೆ ಜಯಘೋಷ ಕೂಗಿದರು.

ಈ ವೇಳೆ ಮಾತನಾಡಿದ ಜಗದ್ಗುರು ಶ್ರೀ ಫಕೀರ ಸಿದ್ಧರಾಮ ಮಹಾಸ್ವಾಮಿಗಳು, ಜಾತ್ರೆ ಮುನ್ನಾದಿನ ವರ್ಷಾಸನೆ ಸಂಪ್ರದಾಯವು ಭಾವೈಕ್ಯತೆಯ ಸಂಕೇತವಾಗಿದ್ದು, ಸಂಪ್ರದಾಯದಂತೆ ನಡೆದು ಬರುತ್ತಿದೆ. ಈ ವರ್ಷ ಜಗತ್ತಿಗೆ ಸುಖ, ಶಾಂತಿ, ನೆಮ್ಮದಿ ದೊರಕಲಿ. ಸಮೃದ್ಧ ಮಳೆ ಬೆಳೆಯಾಗಿ ರೈತರು ಸೇರಿದಂತೆ ಸಕಲ ಜೀವಜಾತಿಗಳು ಸಂತೃಪ್ತ ಜೀವನ ನಡೆಸಲಿ. ದ್ವೇಷ–ಅಸೂಯೆಗಳು ದೂರವಾಗಿ ಪ್ರೀತಿ–ಸ್ನೇಹ ವೃದ್ಧಿಯಾಗಲಿ ಎಂದು ದೇವರಲ್ಲಿ ಪ್ರಾರ್ಥನೆ ಸಲ್ಲಿಸಿ ಜಾತ್ರೆ ನೆರವೇರಿಸೋಣ ಎಂದರು.

ಮೇ 1ರಿಂದ ಆರಂಭವಾಗುವ ಜಾತ್ರೆಯಲ್ಲಿ ಭಕ್ತರು ಹೆಚ್ಚಿನ ಸಂಖ್ಯೆಯಲ್ಲಿ ಪಾಲ್ಗೊಂಡು ಫಕ್ಕೀರೇಶ್ವರರ ಕೃಪೆಗೆ ಪಾತ್ರರಾಗಬೇಕೆಂದು ಅವರು ಕೋರಿದರು.

ಈ ಸಂದರ್ಭದಲ್ಲಿ ಸೋಮೇಶ್ವರ ಭಕ್ತರ ಟ್ರಸ್ಟ್ ಅಧ್ಯಕ್ಷ ಗುರಣ್ಣ ಪಾಟೀಲ ಕುಲಕರ್ಣಿ, ಜಾತ್ರಾ ಸಮಿತಿ ಅಧ್ಯಕ್ಷ ಕುಬೇರಪ್ಪ ಮಹಾಂತಶೆಟ್ಟರ, ಭಕ್ತರಾದ ಸೋಮಶೇಖರ ಗಾಂಜಿ, ಮಲ್ಲಿಕಾರ್ಜುನ ಮಹಾಂತಶೆಟ್ಟರ, ಎಂ.ಕೆ. ಕಳ್ಳಿಮಠ, ಜಗದೀಶ ಪಿಳ್ಳಿ, ಗಂಗಾಧರಯ್ಯ ಫಕ್ಕೀರಸ್ವಾಮಿಮಠ, ನಿಂಗಪ್ಪ ತಹಸೀಲ್ದಾರ, ಚಂಬಣ್ಣ ಬಾಳಿಕಾಯಿ, ಸುರೇಶ ರಾಚನಾಯ್ಕರ, ಸುಗೀರಪ್ಪ ವಾಲಿಶೆಟ್ಟರ, ನಾಗರಾಜ ತೋಟರ, ಸಿದ್ದು ಫಕ್ಕೀರಸ್ವಾಮಿಮಠ, ವಿರೂಪಾಕ್ಷ, ಮಯೂರಗೌಡ ಪಾಟೀಲ, ಶಿವಾನಂದ ದೊಡ್ಡಮನಿ, ಎಂ.ಆರ್. ಬೆಳವಟಗಿ, ಶಿವಯೋಗಿ ಅಂಕಲಕೋಟಿ, ಜಿ.ಎಸ್. ಗುಡಗೇರಿ ಹಾಗೂ ಅಂಜುಮನ್ ಮತ್ತು ದರ್ಗಾ ಸಮಿತಿಯ ಮುಖಂಡರು ಸೇರಿದಂತೆ ಅಪಾರ ಭಕ್ತರು ಪಾಲ್ಗೊಂಡಿದ್ದರು.

### ಭಾವೈಕ್ಯತೆಯ ಮೆರವಣಿಗೆ

ಹಿಂದೂ–ಮುಸ್ಲಿಂ ಭಾವೈಕ್ಯತೆಯ ಕೇಂದ್ರವಾಗಿರುವ ಶಿರಹಟ್ಟಿ ಫಕ್ಕೀರೇಶ್ವರ ಮಠದ ಜಾತ್ರೆ ಮುನ್ನಾದಿನ ಪಟ್ಟಣಕ್ಕೆ ವರ್ಷಾಸನೆಗೆ ಬರುವ ಸಂಪ್ರದಾಯದಂತೆ, ಶ್ರೀಗಳು ಆನೆ, ಛತ್ರ, ಚಾಮರ ಹಾಗೂ ವಾದ್ಯಗಳೊಂದಿಗೆ ಮೆರವಣಿಗೆಯ ಮೂಲಕ ಭಕ್ತರ ಮನೆಗಳಿಗೆ ಭೇಟಿ ನೀಡಿ ಕಾಣಿಕೆ, ದವಸ–ಧಾನ್ಯಗಳನ್ನು ಸ್ವೀಕರಿಸಿ ಆಶೀರ್ವಾದ ನೀಡಿದರು. ಜೊತೆಗೆ ಜಾತ್ರೆಯಲ್ಲಿ ಭಾಗವಹಿಸುವಂತೆ ಭಕ್ತರಿಗೆ ಆಹ್ವಾನ ನೀಡಿದರು.

# ಹುಲಕೋಟಿ ಕಾಲೇಜಿನಲ್ಲಿ ಪದವಿ ಪ್ರವೇಶ ಆರಂಭ

■ವಿಜಯಸಾಕ್ಷಿ ಸುದ್ದಿ, ಹುಲಕೋಟಿ

ಕೆ.ಎಚ್. ಪಾಟೀಲ ಸರ್ಕಾರಿ ಪ್ರಥಮ ದರ್ಜೆ ಕಾಲೇಜು ನಲ್ಲಿ ಬಿಎ, ಬಿಕಾಂ, ಬಿಎಸ್ಸಿ ಹಾಗೂ ಬಿಸಿಎ ಕೋರ್ಸ್‌ಗಳಿಗೆ 2026–27ನೇ ಶೈಕ್ಷಣಿಕ ಸಾಲಿನ ಪದವಿ ಪ್ರವೇಶ ಪ್ರಕ್ರಿಯೆ ಆರಂಭಗೊಂಡಿದೆ.

ಪ್ರಸ್ತುತ ಶೈಕ್ಷಣಿಕ ವರ್ಷದಿಂದ ಕಾಲೇಜನ್ನು ಸರ್ಕಾರವು ಮಾದರಿ ಕಾಲೇಜಾಗಿ ಘೋಷಿಸಿದ್ದು, ಗುಣಮಟ್ಟದ ಶಿಕ್ಷಣ, ಅನುಭವಜ್ಞ ಪ್ರಾಧ್ಯಾಪಕರು, ಸುಸಜ್ಜಿತ ಗ್ರಂಥಾಲಯ ಹಾಗೂ ಪ್ರಯೋಗಾಲಯಗಳು, ವಿಶಾಲ ಮೈದಾನ, ವೈ–ಫೈ, ಕ್ರೀಡಾ ಮತ್ತು ಐಸಿಟಿ ಸೇರಿದಂತೆ ಆಧುನಿಕ ಸೌಲಭ್ಯಗಳು ವಿದ್ಯಾರ್ಥಿಗಳಿಗೆ ಲಭ್ಯವಿವೆ.

ವಿದ್ಯಾರ್ಥಿನಿಯರಿಗೆ ಶುಲ್ಕ ಮರುಪಾವತಿ ಸೌಲಭ್ಯ, ವಿದ್ಯಾರ್ಥಿಗಳಿಗೆ ಅಂಕಗಳ ಆಧಾರದ ಮೇಲೆ ವಿದ್ಯಾರ್ಥಿವೇತನ, ಶುದ್ಧ ಕುಡಿಯುವ ನೀರಿನ ಘಟಕ ಸೇರಿದಂತೆ ಎನ್‌ಎಸ್‌ಎಸ್, ಸ್ಕೌಟ್ಸ್ ಮತ್ತು ಗೈಡ್ಸ್, ಯುವ ರೆಡ್ ಕ್ರಾಸ್ ಮುಂತಾದ ಚಟುವಟಿಕೆಗಳೂ ಕಾಲೇಜಿನ ವಿಶೇಷತೆಗಳಾಗಿವೆ.

ವಿದ್ಯಾರ್ಥಿಗಳು ಈ ಅವಕಾಶವನ್ನು ಸದ್ಬಳಕೆ ಮಾಡಿಕೊಳ್ಳಬೇಕು ಎಂದು ಪ್ರಾಚಾರ್ಯ ಡಾ. ಸುಧಾ ಕೌಜಗೇರಿ ಪ್ರಕಟಣೆಯಲ್ಲಿ ತಿಳಿಸಿದ್ದಾರೆ.

ಹೆಚ್ಚಿನ ಮಾಹಿತಿಗಾಗಿ 9739425750, 8310720105, 9886592927 ಸಂಖ್ಯೆಗಳನ್ನು ಸಂಪರ್ಕಿಸಬಹುದು.

ಮಗಿಮಾವಿನಹಳ್ಳಿ ಪ್ರಾಥಮಿಕ ಆರೋಗ್ಯ ಕೇಂದ್ರದಲ್ಲಿ ಅವ್ಯವಸ್ಥೆ; ಸ್ವಚ್ಛತೆ ಕೊರತೆ, ಸಿಬ್ಬಂದಿ ಅಭಾವಕ್ಕೆ ಜನರ ಆಕ್ರೋಶ!

# ಸಂಜೆ ವೇಳೆ ಆಸ್ಪತ್ರೆ ಅನಾಥ: ವೈದ್ಯರಿಲ್ಲ, ನರ್ಸ್‌ಗಳೂ ಗೈರು!

■ವಿಜಯಸಾಕ್ಷಿ ಸುದ್ದಿ, ಹಗರಿಬೊಮ್ಮನಹಳ್ಳಿ

ತಾಲೂಕಿನ ಮಗಿಮಾವಿನಹಳ್ಳಿ ಪ್ರಾಥಮಿಕ ಆರೋಗ್ಯ ಕೇಂದ್ರದಲ್ಲಿ ಭಾನುವಾರ ಸಂಜೆ ವೇಳೆ ವೈದ್ಯರು ಹಾಗೂ ನರ್ಸ್‌ಗಳು ಲಭ್ಯವಿಲ್ಲದೆ ಹೊರ ರೋಗಿಗಳು, ಹೆರಿಗೆಗಾಗಿ ದಾಖಲಾಗಿದ್ದ ಗರ್ಭಿಣಿಯರು, ಬಾಣಂತಿಯರು ಸೇರಿದಂತೆ ಅನೇಕರು ಸಂಕಷ್ಟ ಅನುಭವಿಸುವಂತಾಯಿತು.

ಈ ಆರೋಗ್ಯ ಕೇಂದ್ರವು ಸುತ್ತಮುತ್ತಲಿನ ಗ್ರಾಮಗಳಿಗೆ ಮಧ್ಯ ಕೇಂದ್ರವಾಗಿದ್ದು, ಸಂಜೆ 6ರಿಂದ 8 ಗಂಟೆಯವರೆಗೆ ಬರುವ ರೋಗಿಗಳು ಚಿಕಿತ್ಸೆಗಾಗಿ ಕಾಯುವ ಪರಿಸ್ಥಿತಿ ನಿರ್ಮಾಣವಾಗುತ್ತಿದೆ. ಬಳಿಕ ಬರುವ ಸಿಬ್ಬಂದಿ ಹಾಗೂ ನರ್ಸ್‌ಗಳು ಡ್ಯೂಟಿ ಡ್ರೆಸ್ ಇಲ್ಲದೆ ಸಾಮಾನ್ಯ ಉಡುಪಿನಲ್ಲಿ ಸೇವೆಗೆ ಬರುತ್ತಿರುವುದರಿಂದ ಸೋಂಕು ಹರಡುವ ಭೀತಿ ಇದೆ ಎಂದು ಜನರು ಆತಂಕ ವ್ಯಕ್ತಪಡಿಸಿದ್ದಾರೆ.

ಆಸ್ಪತ್ರೆಯ ಡ್ರೆಸ್ಸಿಂಗ್ ರೂಮ್‌ನಲ್ಲಿ ಯುಪಿಎಸ್ (ವಿದ್ಯುತ್ ಬ್ಯಾಟರಿ) ಅಳವಡಿಕೆ ಮಾಡಿರುವುದರಿಂದ ಯಾವಾಗ ಬೇಕಾದರೂ ಅನಾಹುತ ಸಂಭವಿಸುವ ಸಾಧ್ಯತೆ ಇದೆ ಎಂಬುದಾಗಿ ಸಾರ್ವಜನಿಕರು ದೂರಿದ್ದಾರೆ.







ಆಸ್ಪತ್ರೆಯ ಒಳಭಾಗ ಮತ್ತು ಹೊರಭಾಗದಲ್ಲಿ ಸ್ವಚ್ಛತೆ ಸಂಪೂರ್ಣ ಹದಗೆಟ್ಟಿದ್ದು, ಎಲ್ಲೆಂದರಲ್ಲಿ ಕಸ, ಪ್ಲಾಸ್ಟಿಕ್ ತ್ಯಾಜ್ಯ, ಗಿಡಗಂಟೆಗಳು ಬೆಳೆದು ವಿಷಜಂತುಗಳ ತಾಣವಾಗಿ ಮಾರ್ಪಟ್ಟಿದೆ. ಶೌಚಾಲಯಗಳು ಅಸ್ವಚ್ಛವಾಗಿದ್ದು, ಹೊಸದಾಗಿ ನಿರ್ಮಿಸಿರುವ ಶೌಚಾಲಯಗಳು ವರ್ಷ ಕಳೆದರೂ ಬಳಕೆಗೆ ನೀಡಲಾಗಿಲ್ಲ ಎಂಬ ಆರೋಪ ಕೇಳಿ ಬಂದಿದೆ.

ಕೇಂದ್ರದ ಹೊರಭಾಗದಲ್ಲಿರುವ ಹೊಸ ಕಟ್ಟಡಗಳು ಬಳಕೆಗೆ ಬಾರದಂತೆ ಪಾಳು ಬಿದ್ದಿರುವುದು ಅಧಿಕಾರಿಗಳ ನಿರ್ಲಕ್ಷ್ಯವನ್ನು ಎತ್ತಿಹಿಡಿಯುತ್ತದೆ.

ಈ ಕುರಿತು ಆಡಳಿತಾಧಿಕಾರಿ ಡಾ. ತನುಷಾ ಪ್ರತಿಕ್ರಿಯಿಸಿ, "ಸ್ವಚ್ಛತೆಗಾಗಿ ಡಿ-ಗ್ರೂಪ್ ಸಿಬ್ಬಂದಿ ಒಬ್ಬರೇ ಇರುವುದರಿಂದ ಸಮಸ್ಯೆಯಾಗಿದೆ. ಗ್ರಾಮ ಪಂಚಾಯತಿ ಅಭಿವೃದ್ಧಿ ಅಧಿಕಾರಿಗಳಿಗೆ ಹಲವು ಬಾರಿ ಮನವಿ ಮಾಡಿದರೂ ಕ್ರಮ ಕೈಗೊಳ್ಳಲಾಗಿಲ್ಲ" ಎಂದು ಹೇಳಿದರು.

ಸಂಜೆ ವೇಳೆಯಲ್ಲಿ ಸಿಬ್ಬಂದಿ ಗೈರುಹಾಜರಿ ಕುರಿತು ಪ್ರಶ್ನಿಸಿದಾಗ, "ಸಿ.ಸಿ. ಕ್ಯಾಮೆರಾ ಪರಿಶೀಲಿಸಿ ಸಂಬಂಧಪಟ್ಟವರ ಮೇಲೆ ಕ್ರಮ ಕೈಗೊಳ್ಳಲಾಗುತ್ತದೆ" ಎಂದು ತಿಳಿಸಿದರು.

ಮಗಿಮಾವಿನಹಳ್ಳಿ ಪ್ರಾಥಮಿಕ ಆರೋಗ್ಯ ಕೇಂದ್ರವು ಜಿಲ್ಲೆಯಲ್ಲಿ ಉತ್ತಮ ಕೇಂದ್ರವೆಂದು ಗುರುತಿಸಿಕೊಂಡಿದ್ದು, ಇಲ್ಲಿ ತಿಂಗಳಿಗೆ 50-60 ಹೆರಿಗೆಗಳು ನಡೆಯುತ್ತವೆ. ಇಂತಹ ಕೇಂದ್ರದಲ್ಲಿ ಸಂಜೆ ವೇಳೆಯಲ್ಲಿ ಸಿಬ್ಬಂದಿ ಕೊರತೆ ಹಾಗೂ ಸ್ವಚ್ಛತಾ ಸಮಸ್ಯೆ ಉಂಟಾಗಿರುವುದು ಗಂಭೀರವಾಗಿದೆ ಎಂದು ಡಿಎಚ್‌ಒ ಡಾ. ಶಂಕರನಾಯ್ಕ್ ತಿಳಿಸಿದ್ದಾರೆ.

### ಸಾರ್ವಜನಿಕರ ಒತ್ತಾಯ

ಈ ಕುರಿತು ಸಂಬಂಧಪಟ್ಟ ಮೇಲಾಧಿಕಾರಿಗಳು ತಕ್ಷಣ ಪರಿಶೀಲನೆ ನಡೆಸಿ, ಆಸ್ಪತ್ರೆಯ ಅವ್ಯವಸ್ಥೆ ಸರಿಪಡಿಸುವಂತೆ ಸಾರ್ವಜನಿಕರು ಆಗ್ರಹಿಸಿದ್ದಾರೆ.

---

‘ಕೆ.ಬಿ.ಎಲ್ ಸುರಕ್ಷಾ’ ಯೋಜನೆಯಿಂದ ಮೃತ ಗ್ರಾಹಕರ ಕುಟುಂಬಕ್ಕೆ ರೂ. 10 ಲಕ್ಷ ನೆರವು-ಕಲ್ಲೋ ಕುಲಕರ್ಣಿ

## "ಗ್ರಾಹಕರ ಹಿತರಕ್ಷಣೆಯೇ ನಮ್ಮ ಧ್ಯೇಯ"




■ವಿಜಯಸಾಕ್ಷಿ ಸುದ್ದಿ, ಧಾರವಾಡ

"ನಮ್ಮ ಬ್ಯಾಂಕ್ ಕೇವಲ ವ್ಯವಹಾರಕ್ಕೆ ಸೀಮಿತವಾಗಿಲ್ಲ, ಗ್ರಾಹಕರ ಹಿತರಕ್ಷಣೆಯೇ ನಮ್ಮ ಪ್ರಮುಖ ಧ್ಯೇಯ. ವರ್ಷಕ್ಕೆ ಕೇವಲ ರೂ . 369 ಪ್ರೀಮಿಯಂ ಪಾವತಿಸುವ ಮೂಲಕ ರೂ. 10 ಲಕ್ಷ ವಿಮಾ ರಕ್ಷಣೆ ಪಡೆಯುವ ಈ ಯೋಜನೆ ಸಾಮಾನ್ಯ ಜನರಿಗೆ ಆರ್ಥಿಕ ಭದ್ರತೆ ಒದಗಿಸುತ್ತದೆ" ಎಂದು ಧಾರವಾಡ ಕ್ಲಸ್ಟರ್ ಹೆಡ್ ಕಲ್ಲೋ ಕುಲಕರ್ಣಿ ಹೇಳಿದರು.ಕರ್ನಾಟಕ ಬ್ಯಾಯ ಜಾರಿಗೆ ತಂದಿರುವ ‘ಕೆ.ಬಿ.ಎಲ್ ಸುರಕ್ಷಾ’ (KBL Suraksha) ಅಪಘಾತ ವಿಮಾ ಯೋಜನೆಯಡಿ, ಅಪಘಾತದಲ್ಲಿ ನಿಧನರಾದ ಬ್ಯಾಂಕ್ ಗ್ರಾಹಕ ತುಪ್ಪದ್ ಅವರ ಪತ್ನಿ ಶ್ರೀಮತಿ ಪುಷ್ಪಾಂಜಲಿ ತುಪ್ಪದ್ ಅವರಿಗೆ ರೂ.10 ಲಕ್ಷ ಮೊತ್ತದ ವಿಮಾ ಪರಿಹಾರದ ಚೆಕ್ ವಿತರಿಸಿ ಅವರು ಮಾತನಾಡಿದರು.

ಈ ಸಂದರ್ಭದಲ್ಲಿ ಅವರು, ಸಂಕಷ್ಟದ ಸಮಯದಲ್ಲಿ ಇಂತಹ ವಿಮಾ ಯೋಜನೆಗಳು ಕುಟುಂಬಗಳಿಗೆ ಮಹತ್ತರ ಆಧಾರವಾಗುತ್ತವೆ. ಮೃತರ ಕುಟುಂಬಕ್ಕೆ ನೀಡಿರುವ ಈ ನೆರವು ಮುಂದಿನ ಜೀವನಕ್ಕೆ ಸಹಕಾರಿಯಾಗಲಿ ಎಂದು ಆಶಿಸಿದರು.

ಕಾರ್ಯಕ್ರಮದಲ್ಲಿ ಬ್ಯಾಂಕಿನ ಶಾಖಾಧಿಕಾರಿ ಸಾತ್ವಿಕ ಭಾರದ್ವಾಜ್ ಹಾಗೂ ಸಿಬ್ಬಂದಿ ವರ್ಗದವರು ಉಪಸ್ಥಿತರಿದ್ದರು. ಸಾರ್ವಜನಿಕರಿಗೆ ಮನವಿ: ಕಡಿಮೆ ವೆಚ್ಚದಲ್ಲಿ ಹೆಚ್ಚಿನ ಭದ್ರತೆ ನೀಡುವ ಇಂತಹ ವಿಮಾ ಯೋಜನೆಗಳನ್ನು ಪ್ರತಿಯೊಬ್ಬರೂ ಪಡೆದುಕೊಂಡು ತಮ್ಮ ಕುಟುಂಬದ ಭವಿಷ್ಯವನ್ನು ಸುರಕ್ಷಿತಗೊಳಿಸಬೇಕು ಎಂದು ಕರೆ ನೀಡಲಾಗಿದೆ.

### ಯೋಜನೆಯ ವಿವರಗಳು

ಯೋಜನೆ: ಕೆ.ಬಿ.ಎಲ್ ಸುರಕ್ಷಾ (KBL Suraksha) ▯ ವೈಯಕ್ತಿಕ ಅಪಘಾತ ವಿಮೆ

ಪ್ರೀಮಿಯಂ: ವರ್ಷಕ್ಕೆ ರೂ.369 (ದಿನಕ್ಕೆ ರೂ.1)

ವಿಮಾ ಮೊತ್ತ: ರೂ.10 ಲಕ್ಷ

---

ಅಂಬಾಭವಾನಿ ದೇವಸ್ಥಾನದಲ್ಲಿ ಕಳಸಾರೋಹಣ-ಪ್ರಾಣ ಪ್ರತಿಷ್ಠಾಪನೆ

## ರೂ. 2.50 ಕೋಟಿ ವೆಚ್ಚದ ಸಮುದಾಯ ಭವನ ನಾಳೆ ಲೋಕಾರ್ಪಣೆ



■ವಿಜಯಸಾಕ್ಷಿ ಸುದ್ದಿ, ಲಕ್ಷ್ಮೇಶ್ವರ

ಸುಮಾರು 5-6 ದಶಕಗಳ ಭವ್ಯ ಇತಿಹಾಸ ಹೊಂದಿರುವ ಲಕ್ಷ್ಮೇಶ್ವರ ಭಾಗದ ಜಾಗೃತ ದೇವರಾಗಿ ಪ್ರಸಿದ್ಧಿ ಪಡೆದ ಶ್ರೀ ಅಂಬಾಭವಾನಿ ದೇವಸ್ಥಾನದ ಆವರಣದಲ್ಲಿ ರೂ. 2.50 ಕೋಟಿ ವೆಚ್ಚದಲ್ಲಿ ನಿರ್ಮಾಣಗೊಂಡಿರುವ ಶ್ರೀ ಸಹಸ್ರಾರ್ಜುನ ಸಮುದಾಯ ಭವನ ಉದ್ಘಾಟನೆಗೆ ಸಜ್ಜಾಗಿದೆ.

ಗುರುವಾರ (ಎಪ್ರಿಲ್ 30) ಬೆಳಿಗ್ಗೆ 8 ಗಂಟೆಯಿಂದ ದೇವಸ್ಥಾನ ಆವರಣದಲ್ಲಿ ನೂತನವಾಗಿ ಪ್ರತಿಷ್ಠಾಪಿಸಿರುವ ಗಣಪತಿ, ಸುಬ್ರಹ್ಮಣ್ಯ, ಸಿಂಹ, ಕೂರ್ಮ ಹಾಗೂ ಶ್ರೀ ದೇವಿಯ ಪಾದುಕೆಯ ಪ್ರಾಣ ಪ್ರತಿಷ್ಠಾಪನೆ ಕಾರ್ಯಕ್ರಮವು ಹೋಮ-ಹವನಗಳೊಂದಿಗೆ ಶಾಸ್ತ್ರೋಕ್ತವಾಗಿ ನಡೆಯಲಿದೆ.

ಶುಕ್ರವಾರ (ಮೇ 1) ಬೆಳಿಗ್ಗೆ 9 ಗಂಟೆಗೆ ಶ್ರೀ ಅಂಬಾಭವಾನಿ ದೇವಸ್ಥಾನದ ಕಳಸಾರೋಹಣ ಕಾರ್ಯಕ್ರಮವನ್ನು ಕೊಪ್ಪಳ ಗವಿಮಠದ ಪರಮಪೂಜ್ಯ ಜಗದ್ಗುರು ಅಭಿನವ ಶ್ರೀ ಗವಿಸಿದ್ಧೇಶ್ವರ ಮಹಾಸ್ವಾಮಿಗಳು ನೆರವೇರಿಸಲಿದ್ದಾರೆ. ನಂತರ ಶ್ರೀ ಸಹಸ್ರಾರ್ಜುನ ಸಮುದಾಯ ಭವನವನ್ನು ಅಖಿಲ ಭಾರತ ಎಸ್‌ಎಸ್‌ಕೆ ಸಮಾಜದ ಅಧ್ಯಕ್ಷ ಸ್ವಾಮಿಸಾ ಖೋಡೆ ಉದ್ಘಾಟಿಸಲಿದ್ದಾರೆ. ನೂತನ ಗಣಪತಿ ದೇವಸ್ಥಾನಕ್ಕೆ ಎಸ್‌ಎಸ್‌ಕೆ ಸಮಾಜದ ರಾಜ್ಯಾಧ್ಯಕ್ಷ ಡಾ. ಶಶಿಕುಮಾರ ಮೆಹರವಾಡೆ ಪುಷ್ಪಾರ್ಚನೆ ಸಲ್ಲಿಸಲಿದ್ದಾರೆ.

ನಂತರ ನಡೆಯುವ ವೇದಿಕೆ ಕಾರ್ಯಕ್ರಮದ ಸಾನಿಧ್ಯವನ್ನು ಗವಿಸಿದ್ದೇಶ್ವರ ಶ್ರೀಗಳು ವಹಿಸಲಿದ್ದು, ರಾಜ್ಯಸಭಾ ಸದಸ್ಯ ನಾರಾಯಣಸಾ ಭಾಂಡಗೆ ಕಾರ್ಯಕ್ರಮ ಉದ್ಘಾಟಿಸಲಿದ್ದಾರೆ. ಎಸ್‌ಎಸ್‌ಕೆ ಸಮಾಜದ ಅಧ್ಯಕ್ಷ ಪರಶುರಾಮಸಾ ಬದಿ ಅಧ್ಯಕ್ಷತೆ ವಹಿಸಲಿದ್ದಾರೆ.

ಮುಖ್ಯ ಅತಿಥಿಗಳಾಗಿ ಶ್ರೀನಿವಾಸ ಖೋಡೆ, ರಾಮಚಂದ್ರಸಾ ಕಬಾರಿ, ಸತ್ಯನಾರಾಯಣಸಾ ಡಮಾಮ್, ಟಿ.ಎಂ. ಮೆಹರವಾಡೆ, ಶಾಸಕ ಡಾ. ಚಂದ್ರು ಲಮಾಣಿ, ಮಾಜಿ ಶಾಸಕರಾದ ಜಿ.ಎಂ. ಮಹಾಂತಶೆಟ್ಟರ, ಜಿ.ಎಸ್. ಗಡ್ಡದೇವರಮಠ, ಅಶೋಕ ಕಾಟವೇ, ಸತೀಶ ಮೆಹರವಾಡೆ, ಹನುಮಂತಸಾ ಕಾಟವಾ ಸೇರಿದಂತೆ ಅನೇಕ ಗಣ್ಯರು ಭಾಗವಹಿಸಲಿದ್ದಾರೆ.

ಕಾರ್ಯಕ್ರಮದ ಯಶಸ್ಸಿಗಾಗಿ ಎಸ್‌ಎಸ್‌ಕೆ ಸಮಾಜದ ಪಂಚ ಟ್ರಸ್ಟ್ ಸಮಿತಿ, ಮಹಿಳಾ ಮಂಡಳಿ ಹಾಗೂ ತರುಣ ಸಂಘದ ಸದಸ್ಯರು ಸಕಲ ಸಿದ್ಧತೆಗಳನ್ನು ಮಾಡಿಕೊಂಡಿದ್ದಾರೆ ಎಂದು ಅಧ್ಯಕ್ಷ ಪರಶುರಾಮಸಾ ಬದಿ ಪೂರ್ವಭಾವಿ ಸಭೆಯಲ್ಲಿ ತಿಳಿಸಿದರು. ಈ ಸಂದರ್ಭದಲ್ಲಿ ಲಕ್ಷ್ಮಣಸಾ ರಾಜೋಳಿ, ತುಕಾರಾಮಸಾ ಬದಿ, ವಿಠ್ಠಲಸಾ ಶಿದ್ಲಿಂಗ, ತಿಪ್ಪಣ್ಣಸಾ ಬಾಕಳೆ, ಭರತ ಬಾಕಳೆ, ಗಣೇಶ ಬದಿ, ರಂಗನಾಥಸಾ ಬದಿ ಸೇರಿದಂತೆ ಹಲವರು ಉಪಸ್ಥಿತರಿದ್ದರು.

---

▶▶ಮೊದಲನೇ ಪುಟದಿಂದ

## 11 ಕಳ್ಳರ ಜಾಲ ಭೇದಿಸಿದ ಗದಗ ಪೊಲೀಸರು

ಈ ಎಂಟು ಮಂದಿ ಕಳ್ಳರ ತಂಡವನ್ನು ಬಂಧಿಸುವ ಮೂಲಕ ಬೆಟಗೇರಿ ಬಡಾವಣೆ ಠಾಣೆಯ 4,ವ ಗದಗ ಶಹರ ಠಾಣೆಯ 3 ಹಾಗೂ ಬೆಳಗಾವಿ ಮಾರಿಹಾಳ ಠಾಣೆ-ಯ 4 ಸೇರಿದಂತೆ ಒಟ್ಟು 11 ಪ್ರಕರಣಗಳು ಇತ್ಯರ್ಥಗೊಂಡಿವೆ ಎಂದು ಎಸ್ಪಿ ರೋಹನ್ ಜಗದೀಶ್ ಮಾಹಿತಿ ನೀಡಿದರು.

ಬೆಟಗೇರಿ ಠಾಣೆಯ ಮತ್ತೊಂದು ಭರ್ಜರಿ ಬೇಟೆ ಇನ್ನೊಂದು ಕಾರ್ಯಾಚರಣೆಯಲ್ಲಿ ಬೆಟಗೇರಿ ಪೊಲೀಸ್ ಠಾಣೆಯ ತಂಡವು ಕಲಬುರ್ಗಿ ಜಿಲ್ಲೆಯ ಆಳಂದ ತಾಲೂಕಿನ ಗಂಗಾರಾಮ ಬೈರಾಮ ಚವ್ಹಾಣ, ಕನೀರಾಮ ಕಮಸರ ಚವ್ಹಾಣ ಹಾಗೂ ಮುಂಬೈ ನಿವಾಸಿ ಶ್ರೀಕಾಂತ ಶರಣಪ್ಪ ಪೂಜಾರ ಅವರನ್ನು ಬಂಧಿಸಿದೆ.

ಬಂಧಿತರಿಂದ 116 ಗ್ರಾಂ ಚಿನ್ನಾಭರಣ, 515 ಗ್ರಾಂ ಬೆಳ್ಳಿ ಆಭರಣಗಳು (ಒಟ್ಟು ರೂ.18,66,700 ಮೌಲ್ಯ) ವಶಪಡಿಸಿಕೊಳ್ಳಲಾಗಿದೆ.

ಈ ಮೂವರ ಬಂಧನದಿಂದ ಬೆಟಗೇರಿ ಠಾಣೆಯ 3 ಪ್ರಮುಖ ಮನೆಕಳ್ಳತನ ಪ್ರಕರಣಗಳು ಪತ್ತೆಯಾಗಿವೆ.

---

▶▶ಮೊದಲನೇ ಪುಟದಿಂದ

## ಫಕೀರೇಶ್ವರ ಜಾತ್ರೆ ಯಶಸ್ವಿಗೆ ಪೊಲೀಸ್ ಬಂದೋಬಸ್ತ್ : ಡಿಎಸ್‌ಪಿ ಖಾದ್ರಿ

ಪಟ್ಟಣದ ರಸ್ತೆಗಳು ಇಕ್ಕಟ್ಟಾಗಿರುವುದರಿಂದ ಸಂಚಾರ ವ್ಯವಸ್ಥೆ ಸುಗಮವಾಗಲು ವಿಶೇಷ ಯೋಜನೆ ರೂಪಿಸಲಾಗುತ್ತದೆ.

ಶ್ರೀಮಠದ ವತಿಯಿಂದ ವಾಲಂಟಿಯರ್‌ಗಳ ಪಟ್ಟಿಯನ್ನು ಒದಗಿಸಲು ಸೂಚಿಸಿದ್ದು, ಅವರಿಗೆ ಗುರುತಿನ ಚೀಟಿ (ಐಡಿ ಕಾರ್ಡ್) ನೀಡಲಾಗುತ್ತದೆ. ಅವರು ಕೂಡಾ ಪೊಲೀಸ್ ಸಿಬ್ಬಂದಿಯೊಂದಿಗೆ ಸಂಯೋಜನೆ ಮಾಡಿಕೊಂಡು ಕಾರ್ಯನಿರ್ವಹಿಸಲಿದ್ದಾರೆ.

ಇದಲ್ಲದೆ, ಜಾತ್ರೆಯ ಪ್ರಮುಖ ದಿನವಾದ ಕಡುಬಿನ ಕಾಳಗದಂದು ಶ್ರೀಗಳ ಸುತ್ತಮುತ್ತ ಜನಸಂದಣಿ ನಿಯಂತ್ರಣಕ್ಕಾಗಿ ಪ್ರತ್ಯೇಕ ಕೆಎಸ್‌ಆರ್‌ಪಿ ತುಕಡಿ ನಿಯೋಜಿಸಲಾಗುತ್ತದೆ. ಎಲ್ಲಾ ಅಧಿಕಾರಿಗಳು ಬಾಡಿ ಕ್ಯಾಮೆರಾ ಸಹಿತ ಕರ್ತವ್ಯ ನಿರ್ವಹಿಸಲಿದ್ದಾರೆ ಎಂದು ತಿಳಿಸಿದರು.

**ರಥೋತ್ಸವಕ್ಕೂ ಮುನ್ನ ಸುರಕ್ಷತಾ ಕ್ರಮ ಅಗತ್ಯ :** ತಹಶೀಲ್ದಾರ ಕೆ. ರಾಘವೇಂದ್ರ ರಾವು ಮಾತನಾಡಿ, ಜಾತ್ರೆ ನಿಮಿತ್ತ ರಥದ ಫಿಟ್ನೆಸ್ ಪರೀಕ್ಷೆ ಕಡ್ಡಾಯವಾಗಿದ್ದು, ವಿದ್ಯುತ್ ಅವಘಡಗಳು ಸಂಭವಿಸದಂತೆ ಮುನ್ನೆಚ್ಚರಿಕೆ ವಹಿಸಬೇಕು. ಜನಸಂದಣಿ ನಿಯಂತ್ರಣಕ್ಕಾಗಿ ಪೊಲೀಸ್ ಇಲಾಖೆ ಸೂಕ್ತ ಕ್ರಮಗಳನ್ನು ಕೈಗೊಳ್ಳಲಿದೆ ಎಂದು ಹೇಳಿದರು.

ಸಭೆಯಲ್ಲಿ ಸಿಪಿಐ ಬಿ.ವಿ. ನ್ಯಾಮಗೌಡ, ಪಿಎಸ್‌ಐ ಈರಪ್ಪ ರಿತ್ತಿ, ಬ್ಲಾಕ್ ಕಾಂಗ್ರೆಸ್ ಅಧ್ಯಕ್ಷ ಹುಮಾಯೂನ್ ಮಾಗಡಿ, ಚಾಂದಸಾಬ ಮುಳಗುಂದ, ಸಿ.ಸಿ. ನೂರಶೆಟ್ಟರ, ಅಜ್ಜುಗೌಡ ಪಾಟೀಲ, ಸಂದೀಪ ಕಪ್ಪತ್ತನವರ, ಬಿ.ಎಸ್. ಹಿರೇಮಠ, ಎಂ.ಸಿ. ಹಿರೇಮಠ ಸೇರಿದಂತೆ ಹಲವರು ಉಪಸ್ಥಿತರಿದ್ದರು.

---

## ಸಿಡಿಲಿನ ಅಬ್ಬರ: ನೆಲಮಂಗಲದಲ್ಲಿ ತೆಂಗಿನ ಮರ ಸುಟ್ಟು ಭಸ್ಮ!

■ವಿಜಯಸಾಕ್ಷಿ ಸುದ್ದಿ, ನೆಲಮಂಗಲ

ತಾಲ್ಲೂಕಿನಾದ್ಯಂತ ಬುಧವಾರ ಸಂಜೆ ಸುರಿದ ಗುಡುಗು ಸಹಿತ ಭಾರಿ ಮಳೆಯ ನಡುವೆ ಸಿಡಿಲು ಬಡಿದು ತೆಂಗಿನ ಮರವೊಂದು ಹೊತ್ತಿ ಉರಿದ ಘಟನೆ ನಡೆದಿದೆ.

ಬೂದಿಹಾಲ್‌ನ ಭೋವಿಪಾಳ್ಯ ಗ್ರಾಮದಲ್ಲಿ ಈ ಘಟನೆ ನಡೆದಿದ್ದು, ತೆಂಗಿನ ಮರಕ್ಕೆ ನೇರವಾಗಿ ಸಿಡಿಲು ಬಡಿದ ಪರಿಣಾಮ ಮರದ ಮೇಲ್ಭಾಗದಲ್ಲಿ ಬೆಂಕಿ ಕಾಣಿಸಿಕೊಂಡು ಕ್ಷಣಾರ್ಧದಲ್ಲೇ ಮರ ಸಂಪೂರ್ಣವಾಗಿ ಹೊತ್ತಿ ಉರಿಯತೊಡಗಿದೆ.

ಸಿಡಿಲು ಬಡಿದ ರಭಸಕ್ಕೆ ಬೆಂಕಿ ಜ್ವಾಲೆ ಕಂಡು ಗ್ರಾಮಸ್ಥರು ಕೆಲಕಾಲ ಆತಂಕಗೊಂಡಿದ್ದರು. ಮಳೆಯ ನಡುವೆ ಮರ ಉರಿಯುತ್ತಿರುವ ದೃಶ್ಯ ಸ್ಥಳೀಯರಲ್ಲಿ ಭಯದ ವಾತಾವರಣ ಸೃಷ್ಟಿಸಿತು.

ಘಟನೆಯ ಬಳಿಕ ಬೆಂಕಿ ಕ್ರಮೇಣ ಕಡಿಮೆಯಾಗಿದ್ದು, ಯಾವುದೇ ಮಾನವ ಹಾನಿ ಸಂಭವಿಸಿಲ್ಲ ಎಂದು ತಿಳಿದು ಬಂದಿದೆ.

---

ಹುಬ್ಬಳ್ಳಿ ವಿಮಾನ ನಿಲ್ದಾಣದಿಂದ ರೈಲ್ವೆ ನಿಲ್ದಾಣಕ್ಕೆ ಪ್ರಾಯೋಗಿಕ ಬಸ್ ಸೇವೆ ಆರಂಭ : ಪ್ರಿಯಾಂಗಾ ಎಂ

## "ವಿಮಾನ-ರೈಲು ಸಂಪರ್ಕ ಸುಗಮಗೊಳಿಸಲು ಈ ಸೇವೆ"



■ವಿಜಯಸಾಕ್ಷಿ ಸುದ್ದಿ, ಹುಬ್ಬಳ್ಳಿ

"ವಿಮಾನ ನಿಲ್ದಾಣ ಮತ್ತು ರೈಲ್ವೆ ನಿಲ್ದಾಣಗಳ ನಡುವಿನ ಸಂಪರ್ಕವನ್ನು ಸುಗಮಗೊಳಿಸುವ ಉದ್ದೇಶದಿಂದ ಈ ನೂತನ ಬಸ್ ಸೇವೆಯನ್ನು ಆರಂಭಿಸಲಾಗಿದೆ. ಸಾರ್ವಜನಿಕರು ಇದರ ಸದುಪಯೋಗಪಡಿಸಿಕೊಳ್ಳಬೇಕು" ಎಂದು ವ್ಯವಸ್ಥಾಪಕ ನಿರ್ದೇಶಕಿ ಪ್ರಿಯಾಂಗಾ ಎಂ. ಹೇಳಿದರು.

ಹುಬ್ಬಳ್ಳಿ ವಿಮಾನ ನಿಲ್ದಾಣದಿಂದ ಹುಬ್ಬಳ್ಳಿ ರೈಲ್ವೆ ನಿಲ್ದಾಣದವರೆಗೆ ನೂತನ ನಗರ ಸಾರಿಗೆ ಬಸ್ ಸೇವೆಗೆ ಎಪ್ರಿಲ್ 28ರಂದು ಪ್ರಾಯೋಗಿಕ ಚಾಲನೆ ನೀಡಲಾಗಿದೆ. ಈ ಸಂದರ್ಭದಲ್ಲಿ ಪ್ರಿಯಾಂಗಾ ಎಂ. ಹಾಗೂ ವಿಮಾನ ನಿಲ್ದಾಣದ ನಿರ್ದೇಶಕ ರೂಪೇಶ್ ಕುಮಾರ್ ಬಸ್‌ಗೆ ಚಾಲನೆ ನೀಡಿದರು. ಈ ಸೇವೆಯನ್ನು ವಿಮಾನಗಳ ಆಗಮನ ವೇಳೆಗೆ ಅನುಗುಣವಾಗಿ ರೂಪಿಸಲಾಗಿದ್ದು, ಪ್ರತಿದಿನ ಬೆಳಗ್ಗೆ 8:05, 11:45, ಸಂಜೆ 5:05, 6:35, ಹಾಗೂ ರಾತ್ರಿ 7:10, 8:05 ಮತ್ತು 8:50 ಗಂಟೆಗಳಿಗೆ ಬಸ್ ಸಂಚಾರ ಇರಲಿದೆ.

ಬಸ್ ಮಾರ್ಗವು ಗೋಕುಲ್ ರಸ್ತೆ ಕೇಂದ್ರೀಯ ಬಸ್ ನಿಲ್ದಾಣ, ಹೊಸೂರು ಕ್ರಾಸ್, ಚನ್ನಮ್ಮ ಸರ್ಕಲ್ (ನಗರ ಮತ್ತು ಉಪನಗರ ಬಸ್ ನಿಲ್ದಾಣ) ಮೂಲಕ ಸಾಗುತ್ತಿದ್ದು, ರೈಲ್ವೆ ನಿಲ್ದಾಣವನ್ನು ತಲುಪಲಿದೆ. ಈ ನೂತನ ಸೇವೆಯಿಂದ ವಿಮಾನ ಮತ್ತು ರೈಲು ಪ್ರಯಾಣಿಕರಿಗೆ ಅನುಕೂಲವಾಗುವುದರೊಂದಿಗೆ, ನಗರ ಸಾರಿಗೆ ಸಂಪರ್ಕ ವ್ಯವಸ್ಥೆ ಇನ್ನಷ್ಟು ಬಲಪಡಿಸುವ ಉದ್ದೇಶ ಹೊಂದಲಾಗಿದೆ.

ಕಾರ್ಯಕ್ರಮದಲ್ಲಿ ನಗರ ಸಾರಿಗೆ ವಿಭಾಗೀಯ ನಿಯಂತ್ರಣಾಧಿಕಾರಿ ಎಂ. ಸಿದ್ದಲಿಂಗೇಶ, ಪ್ರತಾಪ ಬಿ.ವಿ., ಅರುಣ ಡಿ.ವಿ., ವಿಭಾಗೀಯ ಸಾರಿಗೆ ಅಧಿಕಾರಿ ಎಸ್.ಆರ್. ಮಾಟೋಳಿ, ತಾಂತ್ರಿಕ ಶಿಲ್ಪಿ ಪ್ರವೀಣ ಈಡೂರ, ನಗರ ಸಾರಿಗೆ ಘಟಕ ವ್ಯವಸ್ಥಾಪಕ ವಿನಾಯಕ ಸಾಲಿಮಠ ಸೇರಿದಂತೆ ಅನೇಕರು ಉಪಸ್ಥಿತರಿದ್ದರು. ಸಾರ್ವಜನಿಕರು ಈ ಸೇವೆಯನ್ನು ಹೆಚ್ಚಿನ ಪ್ರಮಾಣದಲ್ಲಿ ಬಳಸಿಕೊಳ್ಳಬೇಕು ಎಂದು ಸಂಸ್ಥೆ ಪ್ರಕಟಣೆಯಲ್ಲಿ ತಿಳಿಸಿದೆ.

---

ಗದಗ ಜಿಲ್ಲೆಯಲ್ಲಿ ಡೆಂಗ್ಯೂ, ಚಿಕನ್‌ಗುನ್ಯಾ ಪ್ರಕರಣಗಳ ಪರಿಶೀಲನೆ; ಸಾರ್ವಜನಿಕರಿಗೆ ಎಚ್ಚರಿಕೆ

# ಸಾಂಕ್ರಾಮಿಕ ರೋಗಗಳ ತಡೆಗೆ ಸಮನ್ವಯ ಕಾರ್ಯ ಅಗತ್ಯ

■ವಿಜಯಸಾಕ್ಷಿ ಸುದ್ದಿ, ಗದಗ

ಜಿಲ್ಲೆಯಲ್ಲಿ ಸಾಂಕ್ರಾಮಿಕ ರೋಗಗಳ ತಡೆಗೆ ಆರೋಗ್ಯ ಇಲಾಖೆ ಸೇರಿದಂತೆ ಎಲ್ಲ ಇಲಾಖೆಗಳು ಸಮನ್ವಯದಿಂದ ಕಾರ್ಯನಿರ್ವಹಿಸಬೇಕು ಎಂದು ಜಿಲ್ಲಾಧಿಕಾರಿಳಾದ ಸಿ.ಎನ್. ಶ್ರೀಧರ್ ಸೂಚಿಸಿದರು.

ಎಪ್ರಿಲ್ 27ರಂದು ಜಿಲ್ಲಾಧಿಕಾರಿಗಳ ಅಧ್ಯಕ್ಷತೆಯಲ್ಲಿ ಜಿಲ್ಲಾ ಕಣ್ಗಾವಲು ಸಮಿತಿ ಸಭೆ ನಡೆಯಿತು. ಸಭೆಯಲ್ಲಿ H5N1,ಲೆಪ್ಟೋಸ್ಪೈರೋಸಿಸ್, ನೀರಿನಿಂದ ಹರಡುವ ರೋಗಗಳು, ಡೆ-ಂಗ್ಯೂ, ಮಲೇರಿಯಾ, ಚಿಕನ್‌ಗುನ್ಯಾ, ರೇಬೀಸ್, ಹಾವು ಕಡಿತ ಪ್ರಕರಣಗಳು ಹಾಗೂ ಕೆಎಫ್‌ಡಿ (KFD) ಕುರಿತು ಸವಿಸ್ತಾರವಾಗಿ ಪರಿಶೀಲನೆ ನಡೆಸಲಾಯಿತು.

2026ರ ಜನವರಿಯಿಂದ ಮಾರ್ಚ್ ಅವಧಿಯಲ್ಲಿ ಜಿಲ್ಲೆಯಲ್ಲಿ 14 ಡೆಂಗ್ಯೂ, 5 ಚಿಕನ್‌ಗುನ್ಯಾ, 1 ಮಲೇರಿಯಾ, 1 ಲೆಪ್ಟೋಸ್ಪೈರೋಸಿಸ್ ಪ್ರಕರಣಗಳು ದಾಖಲಾಗಿವೆ. ಇದಲ್ಲದೆ 2779 ನಾಯಿ ಕಡಿತ, 482 ಇತರೆ ಪ್ರಾಣಿ ಕಡಿತ, 1 ರೇಬೀಸ್ ಸಾವು, 44 ಹಾವು ಕಡಿತ ಹಾಗೂ 4 ಪ್ರಬಲ (ಔಟ್‌ಬ್ರೇಕ್) ಪ್ರಕರಣಗಳು ವರದಿಯಾಗಿದ್ದು, ಎಲ್ಲವೂ ನಿಯಂತ್ರಣದಲ್ಲಿವೆ ಎಂದು ಅಧಿಕಾರಿಗಳು ಮಾಹಿತಿ ನೀಡಿದರು.



ಎಲ್ಲಾ ಆರೋಗ್ಯ ಕೇಂದ್ರಗಳಲ್ಲಿ ರೇಬೀಸ್ ಲಸಿಕೆ (ARV), ಅಗತ್ಯ ಔಷಧಿಗಳು ಲಭ್ಯವಿರಬೇಕು. ಪ್ರಾಣಿ ಕಡಿತವಾದಲ್ಲಿ ತಕ್ಷಣ ಗಾಯವನ್ನು ಶುದ್ಧಗೊಳಿಸಿ ಪೂರ್ಣ ಲಸಿಕೆ ಕೋರ್ಸ್ ಪಾಲನೆ ಮಾಡಬೇಕು ಎಂದು ಸೂಚಿಸಲಾಯಿತು.

ಸೂಚನೆ: ಸಾರ್ವಜನಿಕರು ಆರೋಗ್ಯ ಇಲಾಖೆಯ ಮಾರ್ಗಸೂಚಿಗಳನ್ನು ಪಾಲಿಸುವ ಮೂಲಕ ಸಾಂಕ್ರಾಮಿಕ ರೋಗಗಳ ನಿಯಂತ್ರಣಕ್ಕೆ ಸಹಕರಿಸಬೇಕು ಎಂದು ಮನವಿ ಮಾಡಲಾಗಿದೆ.

ಸಭೆಯಲ್ಲಿ ಜಿಲ್ಲಾ ಆರೋಗ್ಯ ಮತ್ತು ಕುಟುಂಬ ಕಲ್ಯಾಣಾಧಿಕಾರಿ ಡಾ. ಎಸ್.ಎಸ್. ನೀಲಗುಂದ, ಜಿಲ್ಲಾ ಮೇಲ್ವಿಚಾರಣಾಧಿಕಾರಿಗಳು ಹಾಗೂ ವಿವಿಧ ಇಲಾಖೆಗಳ ಅಧಿಕಾರಿಗಳು ಮತ್ತು ಸಿಬ್ಬಂದಿ ಉಪಸ್ಥಿತರಿದ್ದರು.

> "ಸಾಂಕ್ರಾಮಿಕ ರೋಗಗಳ ತಡೆಗೆ ಇಲಾಖೆಗಳ ಸಮನ್ವಯ ಹಾಗೂ ಸಾರ್ವಜನಿಕರ ಸಹಕಾರ ಅತ್ಯಂತ ಮುಖ್ಯ"
>
> – ಸಿ.ಎನ್. ಶ್ರೀಧರ್, ಜಿಲ್ಲಾಧಿಕಾರಿ

### ಸಾರ್ವಜನಿಕರಿಗೆ ಆರೋಗ್ಯ ಇಲಾಖೆಯ ಮಹತ್ವದ ಸೂಚನೆಗಳು

1. ಕುಡಿಯುವ ನೀರನ್ನು ಕುದಿಸಿ ಅಥವಾ ಶುದ್ಧೀಕರಿಸಿ ಸೇವಿಸಬೇಕು
2. ಮನೆಯ ಸುತ್ತಮುತ್ತ ನೀರು ನಿಲ್ಲದಂತೆ ನೋಡಿಕೊಳ್ಳಬೇಕು
3. ಜ್ವರ, ತಲೆನೋವು, ಮೈಕೈ ನೋವು, ವಾಂತಿ, ಉಸಿರಾಟ ತೊಂದರೆ ಕಂಡುಬಂದರೆ ತಕ್ಷಣ ಸರ್ಕಾರಿ ಆಸ್ಪತ್ರೆಗೆ ಭೇಟಿ ನೀಡಬೇಕು
4. ನಾಯಿ ಅಥವಾ ಇತರೆ ಪ್ರಾಣಿ ಕಡಿತವಾದಲ್ಲಿ ಗಾಯವನ್ನು ಕನಿಷ್ಠ 15 ನಿಮಿಷ ಸಾಬೂನು ನೀರಿನಿಂದ ತೊಳೆಯಬೇಕು ಹಾಗೂ ತಕ್ಷಣ ಆಸ್ಪತ್ರೆಗೆ ತೆರಳಿ ರೇಬೀಸ್ ಲಸಿಕೆ ಪಡೆಯಬೇಕು
5. ಹಾವು ಕಡಿತವಾದಲ್ಲಿ ಯಾವುದೇ ಮನೆಮದ್ದು ಬಳಸದೇ ತಕ್ಷಣ ಆಸ್ಪತ್ರೆಗೆ ದಾಖಲಿಸಬೇಕು
6. ಮಳೆಗಾಲದಲ್ಲಿ ಕೊಳಚೆ ನೀರಿನಲ್ಲಿ ಕೆಲಸ ಮಾಡುವವರು ರಕ್ಷಣಾತ್ಮಕ ಪಾದರಕ್ಷೆ ಧರಿಸಬೇಕು
7. ಆಹಾರ ಮತ್ತು ಕುಡಿಯುವ ನೀರಿನ ಸ್ವಚ್ಛತೆ ಕಾಪಾಡಬೇಕು

## ಪ್ರೊ. ಶಿವಾನಂದ ಪಟ್ಟಣಶೆಟ್ಟರರಿಗೆ ರಾಜ್ಯಮಟ್ಟದ 'ಕಾಯಕಯೋಗಿ' ಪ್ರಶಸ್ತಿ



■ವಿಜಯಸಾಕ್ಷಿ ಸುದ್ದಿ, ಗದಗ

ಕಾರ್ಮಿಕ ದಿನಾಚರಣೆ ಅಂಗವಾಗಿ ವಿಶೇಷ ಸೇವಾ ಸಾಧಕರನ್ನು ಗುರುತಿಸಿ ನೀಡುವ ರಾಜ್ಯಮಟ್ಟದ 'ಕಾಯಕಯೋಗಿ' ಪ್ರಶಸ್ತಿಗೆ ಗದಗ ಜಿಲ್ಲೆಯ ಪ್ರೊ. ಶಿವಾನಂದ ಪಟ್ಟಣಶೆಟ್ಟರ ಅವರು ಆಯ್ಕೆಯಾಗಿದ್ದಾರೆ.

ಬೆಂಗಳೂರು ಗ್ರಾಮಾಂತರ ಜಿಲ್ಲೆಯ ದೊಡ್ಡಬಳ್ಳಾಪುರ ಮೂಲದ ಕರ್ನಾಟಕ ರಾಜ್ಯ ವೈಜ್ಞಾನಿಕ ಮತ್ತು ಸಂಶೋಧನಾ ಪರಿಷತ್ತು (ರಿ) ವತಿಯಿಂದ ಮೇ 1ರಂದು ಈ ಪ್ರಶಸ್ತಿ ಪ್ರದಾನ ಕಾರ್ಯಕ್ರಮ ನಡೆಯಲಿದೆ. ಹೊಸಕೋಟೆ ತಾಲೂಕಿನ ಸೂಲಿಬೆಲೆಯಲ್ಲಿ ನಡೆಯುವ ಸಮಾರಂಭದಲ್ಲಿ ಪ್ರಶಸ್ತಿ ನೀಡಲಾಗುತ್ತದೆ.

ಪ್ರೊ. ಪಟ್ಟಣಶೆಟ್ಟರರು ಶ್ರೀ ಜಗದ್ಗುರು ತೋಂಟದಾರ್ಯ ವಿದ್ಯಾಪೀಠದ ಕಾರ್ಯದರ್ಶಿ ಹಾಗೂ ಆಡಳಿತಾಧಿಕಾರಿಗಳಾಗಿ ಸೇವೆ ಸಲ್ಲಿಸುತ್ತಿದ್ದು, ಶಿಸ್ತು, ಪ್ರಾಮಾಣಿಕತೆ, ಬದ್ಧತೆ ಮತ್ತು ನಿಸ್ವಾರ್ಥ ಸೇವೆಯಿಂದ ಗುರುತಿಸಿಕೊಂಡಿದ್ದಾರೆ. ಶಿಕ್ಷಣ, ಸಾಮಾಜಿಕ ಹಾಗೂ ಧಾರ್ಮಿಕ ಕ್ಷೇತ್ರಗಳಲ್ಲಿ ಇವರ ಸೇವೆ ಗಮನಾರ್ಹವಾಗಿದೆ.

ಪರಿಷತ್ತಿನ ಸಂಸ್ಥಾಪಕ ಅಧ್ಯಕ್ಷ ಡಾ. ಹುಲಿಕಲ್ ನಟರಾಜ್ ಅವರು ಅಭಿನಂದನೆ ಸಲ್ಲಿಸಿದ್ದು, ಈ ಪ್ರಶಸ್ತಿ ಗದಗ ಜಿಲ್ಲೆಯ ಶರಣ ಬಂಧುಗಳಿಗೆ ಸಂತಸ ತಂದಿದೆ ಎಂದು ತಿಳಿಸಿದ್ದಾರೆ.

ಪರಿಷತ್ತಿನ ಜಿಲ್ಲಾ ಅಧ್ಯಕ್ಷ ವಿಜಯಕುಮಾರ್ ಬಣಕಾರ ಅವರು ಪ್ರಕಟಣೆ ನೀಡಿದ್ದು, ರಾಜ್ಯ ಉಪಾಧ್ಯಕ್ಷೆ ಸುಧಾ ಹುಚ್ಚಣ್ಣವರ ಅವರು ಪ್ರೊ. ಪಟ್ಟಣಶೆಟ್ಟರರನ್ನು ಗೌರವಿಸಿ ಆಹ್ವಾನ ಪತ್ರಿಕೆ ನೀಡಿ ಕಾರ್ಯಕ್ರಮಕ್ಕೆ ಆಹ್ವಾನಿಸಿದರು.

ಈ ಸಂದರ್ಭದಲ್ಲಿ ಸುರೇಖಾ ಪಿಳ್ಳಿ, ಅಮರೇಶ್ ಅಂಗಡಿ, ನಟರಾಜ್ ಸೇರಿದಂತೆ ಹಲವರು ಉಪಸ್ಥಿತರಿದ್ದರು.

## ತಿರಸ್ಕೃತ ಬೆಳೆ ವಿಮೆ ಅರ್ಜಿಗಳಿಗೆ ಆಕ್ಷೇಪಣೆ ಸಲ್ಲಿಸಲು ಅವಕಾಶ

■ವಿಜಯಸಾಕ್ಷಿ ಸುದ್ದಿ, ಗದಗ

2024–25ನೇ ಸಾಲಿನ ರೋಣ ಹಾಗೂ ಗಜೇಂದ್ರಗಡ ತಾಲ್ಲೂಕುಗಳ ಮುಂಗಾರು ಮತ್ತು ಹಿಂಗಾರು ಹಂಗಾಮಿನ ತಿರಸ್ಕೃತಗೊಂಡ ಬೆಳೆ ವಿಮೆ ಪ್ರಸ್ತಾವನೆಗಳ ಕುರಿತು ರೈತರಿಗೆ ಆಕ್ಷೇಪಣೆ ಸಲ್ಲಿಸಲು ಅವಕಾಶ ನೀಡಲಾಗಿದೆ.

ಈ ಕುರಿತು ರೋಣದ ಸಹಾಯಕ ಕೃಷಿ ನಿರ್ದೇಶಕರು ಪ್ರಕಟಣೆ ನೀಡಿದ್ದು, ತಮ್ಮ ಬೆಳೆ ವಿಮೆ ಅರ್ಜಿಗಳು ತಿರಸ್ಕೃತಗೊಂಡ ರೈತರು ಅಗತ್ಯ ದಾಖಲೆಗಳೊಂದಿಗೆ ಆಕ್ಷೇಪಣೆ ಸಲ್ಲಿಸಲು ಸೂಚಿಸಲಾಗಿದೆ.

ರೈತರು ಸಂಬಂಧಿತ ಕಚೇರಿಯನ್ನು ಸಂಪರ್ಕಿಸಿ ಹೆಚ್ಚಿನ ಮಾಹಿತಿಯನ್ನು ಪಡೆದು, ಸಮಯ ಮಿತಿಯೊಳಗೆ ಅರ್ಜಿಗಳನ್ನು ಸಲ್ಲಿಸುವಂತೆ ಮನವಿ ಮಾಡಲಾಗಿದೆ.

## ಇಂದು ಲೈಂಗಿಕ ಕಿರುಕುಳ ತಡೆ ವರದಕ್ಷಿಣೆ ನಿಷೇಧ ಕುರಿತು ತರಬೇತಿ

■ವಿಜಯಸಾಕ್ಷಿ ಸುದ್ದಿ, ಗದಗ

ಮಹಿಳೆಯರ ಮೇಲಿನ ಲೈಂಗಿಕ ಕಿರುಕುಳ ತಡೆಗಟ್ಟುವಿಕೆ (POSH ಕಾಯ್ದೆ 2013) ಹಾಗೂ ವರದಕ್ಷಿಣೆ ನಿಷೇಧ ಕಾಯ್ದೆಗಳ ಕುರಿತು ಜಾಗೃತಿ ಮೂಡಿಸುವ ಉದ್ದೇಶದಿಂದ ಎಪ್ರಿಲ್ 30ರಂದು ಒಂದು ದಿನದ ತರಬೇತಿ ಕಾರ್ಯಕ್ರಮವನ್ನು ಹಮ್ಮಿಕೊಳ್ಳಲಾಗಿದೆ.

ಜಿಲ್ಲಾ ಪಂಚಾಯತ್ ಸಭಾಭವನದಲ್ಲಿ ಬೆಳಿಗ್ಗೆ 10.30 ಗಂಟೆಗೆ ನಡೆಯುವ ಈ ತರಬೇತಿಯಲ್ಲಿ, ಲೈಂಗಿಕ ಕಿರುಕುಳ (ತಡೆಗಟ್ಟುವಿಕೆ, ನಿಷೇಧಿಸುವಿಕೆ, ನಿವಾರಿಸುವಿಕೆ) ಕಾಯ್ದೆ 2013, ವರದಕ್ಷಿಣೆ ನಿಷೇಧ ಕಾಯ್ದೆ 1961 ಹಾಗೂ ಕರ್ನಾಟಕ ವರದಕ್ಷಿಣೆ ನಿಷೇಧ ನಿಯಮಗಳು 2004 ಕುರಿತು ಮಾಹಿತಿ ನೀಡಲಾಗುತ್ತದೆ.

ಜಿಲ್ಲಾಧಿಕಾರಿಗಳು ಪ್ರಕಟಣೆ ನೀಡಿದ್ದು, ಇಲಾಖಾ ಮುಖ್ಯಸ್ಥರು, ಕಔಖಲೂ ಸಮಿತಿ ಅಧ್ಯಕ್ಷರು ಹಾಗೂ ಒಬ್ಬ ಸದಸ್ಯರೊಂದಿಗೆ ಕಡ್ಡಾಯವಾಗಿ ತರಬೇತಿಗೆ ಹಾಜರಾಗಬೇಕು ಎಂದು ಸೂಚಿಸಿದ್ದಾರೆ.

ಮಿನಿ ವಿಧಾನಸೌಧದಲ್ಲಿ ತಹಸೀಲ್ದಾರ್‌ಗೆ ಮನವಿ; ಮಹಿಳಾ ಸುರಕ್ಷತೆ ಕುರಿತು ಆತಂಕ

## ಜಿಹಾದಿ ಭಯೋತ್ಪಾದನೆ ತೊಲಗಬೇಕು



■ವಿಜಯಸಾಕ್ಷಿ ಸುದ್ದಿ, ಹಗರಿಬೊಮ್ಮನಹಳ್ಳಿ

ಮಹಾರಾಷ್ಟ್ರದ ನಾಸಿಕ್‌ನ ಟಿಸಿಎಸ್ ಕಂಪನಿಯಲ್ಲಿ ಬಹಿರಂಗಗೊಂಡ ಘಟನೆ ಕೇವಲ ಮಹಿಳಾ ಹಿಂಸೆ ಪ್ರಕರಣವಲ್ಲದೆ, ಆಳವಾದ ವಿಷಕಾರಿ ಮನೋಭಾವ ಹಾಗೂ ಸಂಘಟಿತ ಅಪರಾಧದ ಒಂದು ಭಾಗವಾಗಿರುವಂತೆ ತೋರುತ್ತದೆ ಎಂದು ಹಿಂದೂ ಜನಜಾಗೃತಿ ಸಮಿತಿಯ ಸದಸ್ಯರು ಹಾಗೂ ನಿವೃತ್ತ ಪ್ರಾಂಶುಪಾಲರಾದ ಡಾ. ಚಂದ್ರಮೌಳಿ ಹೇಳಿದರು.

ತಾಲೂಕಿನ ಮಿನಿ ವಿಧಾನಸೌಧದಲ್ಲಿ ತಹಶೀಲ್ದಾರರಿಗೆ ಮನವಿ ಸಲ್ಲಿಸುವ ಸಂದರ್ಭದಲ್ಲಿ ಮಾತನಾಡಿದ ಅವರು, ದೇಶಾದ್ಯಂತ ಮಹಿಳೆಯರ ಮೇಲಿನ ಹಿಂಸೆ ಮತ್ತು ಶೋಷಣೆ ಅತ್ಯಂತ ಗಂಭೀರವಾಗಿದ್ದು, ಅದನ್ನು ತಡೆಯಲು ಕಠಿಣ ಕ್ರಮ ಅಗತ್ಯವಿದೆ ಎಂದು ಅಭಿಪ್ರಾಯಪಟ್ಟರು.

ಕೆಲವು ನಾಯಕರು ತಮ್ಮ ಪ್ರಭಾವವನ್ನು ಬಳಸಿಕೊಂಡು ಮಹಿಳೆಯರ ಮೇಲೆ ಅನ್ಯಾಯ ನಡೆಯುತ್ತಿದೆ ಎಂಬ ಆರೋಪಗಳನ್ನು ಉಲ್ಲೇಖಿಸಿದ ಅವರು, ಇಂತಹ ಘಟನೆಗಳನ್ನು ಸರ್ಕಾರ ಗಂಭೀರವಾಗಿ ಪರಿಗಣಿಸಿ ಕಟ್ಟುನಿಟ್ಟಿನ ಕ್ರಮ ಕೈಗೊಳ್ಳಬೇಕು ಎಂದು ಒತ್ತಾಯಿಸಿದರು.

ಸಮಾಜದಲ್ಲಿ ಶಾಂತಿ, ಸೌಹಾರ್ದತೆ ಹಾಗೂ ಪರಸ್ಪರ ಗೌರವ ಉಳಿಯುವಂತೆ ಕ್ರಮ ಕೈಗೊಳ್ಳಬೇಕು. ಮಹಿಳೆಯರು ಗೌರವಯುತವಾಗಿ ಬದುಕಲು ಸುರಕ್ಷಿತ ವಾತಾವರಣ ನಿರ್ಮಾಣ ಅಗತ್ಯ ಎಂದು ಹೇಳಿದರು.

ಈ ಸಂದರ್ಭದಲ್ಲಿ ಸಮಾಜ ಸೇವಕ ಗೆದ್ದಿಕೆರೆ ನಾಗಭೂಷಣಸ್ವಾಮಿ, ನಿವೃತ್ತ ಪೊಲೀಸ್ ಅಧಿಕಾರಿ ಮಲ್ಲಪ್ಪ, ಗುರುರಾಜಪ್ಪ, ಶಿವಪುತ್ರಣ್ಣ, ತೋಟಪ್ಪ ಕುರುನಿ, ಶಿವಣ್ಣ, ಪೂಜಾ ಶ್ರೀಕಾಂತ್ ಹಾಗೂ ಡಿ. ಶೈಲಜ ಉಪಸ್ಥಿತರಿದ್ದರು.

ಕ್ಷೇತ್ರ ಮರುವಿಂಗಡಣೆ ವಿರುದ್ಧ ಸುಜಾತಾ ದೊಡ್ಡಮನಿ ಆಕ್ರೋಶ; ಬಿಜೆಪಿ ಅಪಪ್ರಚಾರಕ್ಕೆ ಖಂಡನೆ

# ಮಹಿಳಾ ಮೀಸಲಾತಿಗೆ ಕಾಂಗ್ರೆಸ್ ವಿರೋಧವಿಲ್ಲ

■ವಿಜಯಸಾಕ್ಷಿ ಸುದ್ದಿ, ಗದಗ

ಮಹಿಳಾ ಮೀಸಲಾತಿ ವಿಚಾರದಲ್ಲಿ ಕಾಂಗ್ರೆಸ್ ಪಕ್ಷಕ್ಕೆ ಯಾವುದೇ ವಿರೋಧವಿಲ್ಲ ಎಂದು ಶಿರಹಟ್ಟಿ ಮತಕ್ಷೇತ್ರದ ಪರಾಜಿತ ಅಭ್ಯರ್ಥಿ ಶ್ರೀಮತಿ ಸುಜಾತಾ ದೊಡ್ಡಮನಿ ಸ್ಪಷ್ಟಪಡಿಸಿದರು.

ನಗರದ ಪತ್ರಿಕಾ ಭವನದಲ್ಲಿ ಸುದ್ದಿಗೋಷ್ಠಿ ನಡೆಸಿ ಮಾತನಾಡಿದ ಅವರು, ಮಹಿಳಾ ಮೀಸಲಾತಿ ಬಗ್ಗೆ ಕೇಂದ್ರದ ಬಿಜೆಪಿ ಸರ್ಕಾರ ಹಾಗೂ ಮುಖಂಡರು ಅಪಪ್ರಚಾರ ನಡೆಸುತ್ತಿರುವುದನ್ನು ಖಂಡಿಸಲು ರಾಜ್ಯದ ಎಲ್ಲ ಜಿಲ್ಲಾ ಕೇಂದ್ರಗಳಲ್ಲಿ ಮಹಿಳಾ ಮುಖಂಡರು ಪತ್ರಿಕಾ ಗೋಷ್ಠಿಗಳನ್ನು ನಡೆಸುತ್ತಿದ್ದಾರೆ ಎಂದು ತಿಳಿಸಿದರು.




ಮಹಿಳೆಯರ ಮನ ಒಲಿಸಲು ಮೀಸಲಾತಿ ವಿಚಾರವನ್ನು ಮುಂದಿಟ್ಟುಕೊಂಡು ಕ್ಷೇತ್ರಗಳ ಮರುವಿಂಗಡಣೆ ಮಾಡಿ ಆದೇಶ ಹೊರಡಿಸಿರುವುದನ್ನು ಕಾಂಗ್ರೆಸ್ ವಿರೋಧಿಸುತ್ತದೆ ಎಂದು ಅವರು ಹೇಳಿದರು.

ಮಹಿಳೆಯರಿಗೆ 5 ಗ್ಯಾರಂಟಿ ಯೋಜನೆಗಳನ್ನು ಜಾರಿಗೆ ತಂದು ಆರ್ಥಿಕವಾಗಿ ಸಬಲಗೊಳಿಸಿರುವುದು ಕಾಂಗ್ರೆಸ್ ಸರ್ಕಾರವೇ ಎಂದು ಅವರು ಹೇಳಿದರು.

ಮಹಿಳೆಯರ ಬೇಡಿಕೆಗಳನ್ನು ಈಡೇರಿಸಿ, ಪುಣ್ಯಕ್ಷೇತ್ರಗಳ ಭೇಟಿ ಸೇರಿದಂತೆ ಹಲವು ಸೌಲಭ್ಯಗಳನ್ನು ಒದಗಿಸಿ ಗೌರವ ತಂದಿರುವುದು ನಮ್ಮ ಪಕ್ಷದ ಸಾಧನೆ ಎಂದು ಹೇಳಿದರು.

> "ಕ್ಷೇತ್ರ ಮರುವಿಂಗಡಣೆ ಮಾಡದೇ, ಈಗಿರುವ ಸ್ಥಿತಿಯಲ್ಲೇ ಮೀಸಲಾತಿ ನೀಡಿದರೆ ಕಾಂಗ್ರೆಸ್‌ಗೆ ಯಾವುದೇ ಅಭ್ಯಂತರವಿಲ್ಲ"
> – ಸುಜಾತಾ ದೊಡ್ಡಮನಿ,

ಪತ್ರಿಕಾ ಗೋಷ್ಠಿಯಲ್ಲಿ ಕಾಂಗ್ರೆಸ್ ಮಹಿಳಾ ಮುಖಂಡರಾದ ಸ್ವಾತಿ ಮಾಳಗಿ, ಸುರೇಖಾ, ಗದಗ ಜಿಲ್ಲಾ ಮಹಿಳಾ ಘಟಕದ ಅಧ್ಯಕ್ಷೆ ನೀಲಮ್ಮ ಬೋಳನವರ, ಜಯಕ್ಕ ಕಳ್ಳಿ, ನಾಜಿಯಾಬೇಗಂ ಯಲಿಗಾರ, ದಾನೇಶ್ವರಿ ಭಜಂತ್ರಿ, ಉಮಾ ದ್ಯಾವನೂರ, ಶೋಭ ದೇಸಳ್ಳಿ, ವೀಣಾ ಕಟ್ನಳ್ಳಿ ಸೇರಿದಂತೆ ಇತರರು ಉಪಸ್ಥಿತರಿದ್ದರು.

ವಿಶ್ವ ಮಲೇರಿಯಾ ದಿನಾಚರಣೆ ಅಂಗವಾಗಿ ಕೆ. ಎಚ್. ಪಿ. ಐ. ಎಮ್. ಎಸ್‌ನಲ್ಲಿ ನಡೆದ ಜಾಗೃತಿ ಕಾರ್ಯಕ್ರಮದಲ್ಲಿ ಡಾ. ವೆಂಕಟೇಶ್ ರಾಠೋಡ

# ಮಲೇರಿಯಾ ನಿರ್ಮೂಲನೆಗೆ ಕ್ರಮ ಕೈಗೊಳ್ಳಬೇಕು

■ವಿಜಯಸಾಕ್ಷಿ ಸುದ್ದಿ, ಗದಗ

"ಮಲೇರಿಯಾ ನಿರ್ಮೂಲನೆಗಾಗಿ ಅಗತ್ಯ ಕ್ರಮಗಳನ್ನು ಈಗಲೇ ಕೈಗೊಳ್ಳಬೇಕು. 2030ರೊಳಗೆ ಭಾರತವನ್ನು ಮಲೇರಿಯಾ ಮುಕ್ತ ರಾಷ್ಟ್ರವನ್ನಾಗಿಸುವುದು ನಮ್ಮ ಗುರಿ" ಎಂದು ಜಿಲ್ಲಾ ಸಮೀಕ್ಷಣಾಧಿಕಾರಿಗಳು ಹಾಗೂ ಜಿಲ್ಲಾ ರೋಗವಾಹಕ ಆಶ್ರಿತ ರೋಗಗಳ ನಿಯಂತ್ರಣಾಧಿಕಾರಿ ಡಾ. ವೆಂಕಟೇಶ್ ರಾಠೋಡ ಹೇಳಿದರು.

ಜಿಲ್ಲಾ ಆರೋಗ್ಯ ಮತ್ತು ಕುಟುಂಬ ಕಲ್ಯಾಣ ಇಲಾಖೆ, ಜಿಲ್ಲಾ ಸಮೀಕ್ಷಾ ಘಟಕ ಹಾಗೂ ಕೆ.ಎಚ್.ಪಿ.ಐ.ಎಮ್.ಎಸ್. ಗದಗ ಸಮುದಾಯ ಆರೋಗ್ಯ ವಿಭಾಗದ ಸಹಯೋಗದಲ್ಲಿ ಎಪ್ರಿಲ್ 28ರಂದು ಪ್ಯಾರಾಮೆಡಿಕಲ್ ಮತ್ತು ನರ್ಸಿಂಗ್ ವಿದ್ಯಾರ್ಥಿಗಳಿಗೆ ರೋಗವಾಹಕ ಆಶ್ರಿತ ರೋಗಗಳ ನಿಯಂತ್ರಣ ಕುರಿತು ಜಾಗೃತಿ ಕಾರ್ಯಕ್ರಮ ಹಮ್ಮಿಕೊಳ್ಳಲಾಗಿತ್ತು.



ಈ ಸಂದರ್ಭದಲ್ಲಿ ವಿದ್ಯಾರ್ಥಿಗಳಿಗೆ ಡೆಂಗ್ಯೂ ಹರಡುವ ಈಡೀಸ್ ಸೊಳ್ಳೆಗಳ ಸಂತಾನೋತ್ಪತ್ತಿ ತಾಣಗಳ ಮೂಲೋಚ್ಚಾಟನೆ ಬಗ್ಗೆ ಪ್ರಾಯೋಗಿಕ ತರಬೇತಿ ನೀಡಲಾಯಿತು. ವಾರದಲ್ಲಿ ಒಂದು ದಿನ ತರಬೇತಿ ಪಡೆದ ವಿದ್ಯಾರ್ಥಿಗಳ ತಂಡಗಳನ್ನು ರಚಿಸಿ, ಕೆ.ಎಚ್.ಪಿ.ಐ.ಎಮ್.ಎಸ್. ಆಸ್ಪತ್ರೆ ಆವರಣ, ವಸತಿ ನಿಲಯಗಳು, ಕ್ವಾಟರ್ಸ್ ಹಾಗೂ ಪ್ಯಾರಾಮೆಡಿಕಲ್ ಕಾಲೇಜು ಆವರಣಗಳಲ್ಲಿ ಲಾರ್ವಾ ಸಮೀಕ್ಷೆ ಹಾಗೂ ನಿರ್ಮೂಲನಾ ಕಾರ್ಯ ಕೈಗೊಳ್ಳುವಂತೆ ತಿಳಿಸಲಾಯಿತು.

ವಿಭಾಗದ ಸಹಾಯಕ ಕೀಟಶಾಸ್ತ್ರಜ್ಞೆ ಶ್ರೀಮತಿ ಅನ್ನಪೂರ್ಣಾ ಕೆ. ಶೆಟ್ಟರ ಅವರು ಅನಾಫಿಲಿಸ್ ಸೊಳ್ಳೆಗಳ ಉತ್ಪತ್ತಿ ತಾಣಗಳು, ನಿಯಂತ್ರಣ ಕ್ರಮಗಳು ಹಾಗೂ ಸ್ವಯಂ ರಕ್ಷಣಾ ವಿಧಾನಗಳ ಕುರಿತು ಪ್ರಾತ್ಯಕ್ಷಿಕೆ ಮೂಲಕ ಮಾಹಿತಿ ನೀಡಿದರು. ಜೊತೆಗೆ ಡೆಂಗ್ಯೂ ನಿಯಂತ್ರಣ ಕ್ರಮಗಳ ಬಗ್ಗೆ ಸಹ ವಿವರಿಸಿದರು.

ಕಾರ್ಯಕ್ರಮದಲ್ಲಿ ಪ್ರಾಂಶುಪಾಲರು ಡಾ. ರೇಖಾ ಸೋನಾವಾನೆ, ಡಾ. ಅರವಿಂದ ಕರಿನಾಗಣ್ಣನವರ, ಡಾ. ರಮೇಶ್ ಮಾಯಪ್ಪನವರ, ಡಾ. ಪ್ರವೀಣ ನಿಡಗುಂದಿ ಸೇರಿದಂತೆ ಜಿಲ್ಲಾ ಮಟ್ಟದ ಎನ್‌ವಿಬಿಡಿಸಿಪಿ ವಿಭಾಗದ ಅಧಿಕಾರಿಗಳು, ಪ್ರಾಥಮಿಕ ಆರೋಗ್ಯ ಕೇಂದ್ರ ಹರ್ತಿ ಸಿಬ್ಬಂದಿ ಹಾಗೂ ವಿದ್ಯಾರ್ಥಿಗಳು ಭಾಗವಹಿಸಿದ್ದರು.

## ಸೈಟ್ ನೀಡದೆ ಹಣ ವಾಪಸ್ ಮಾಡದ ಪ್ರಕರಣ: ಬಿಲ್ಡರ್‌ಗೆ ದಂಡ, ಪರಿಹಾರ ನೀಡಲು ಆದೇಶ

■ವಿಜಯಸಾಕ್ಷಿ ಸುದ್ದಿ, ಹುಬ್ಬಳ್ಳಿ

ಗ್ರಾಹಕರಿಂದ ಹಣ ಪಡೆದು ಸೈಟ್ ನೀಡದೆ ಸತಾಯಿಸಿದ ಪ್ರಕರಣದಲ್ಲಿ ಪೃಥ್ವಿ ಬಿಲ್ಡರ್ ಹಾಗೂ ಡೆವಲಪರ್‌ನ ಪಾಲುದಾರರಾದ ಶಿವನಗೌಡ ಪಾಟೀಲ ಅವರಿಗೆ ದಂಡ ಹಾಗೂ ಪರಿಹಾರ ನೀಡುವಂತೆ ಜಿಲ್ಲಾ ಗ್ರಾಹಕರ ಆಯೋಗ ಆದೇಶಿಸಿದೆ.

ಒಂದೇ ಕುಟುಂಬದ ಶರದ ಪಾಂಡೆ, ಸಂತೋಷ ಪಾಂಡೆ, ದಿವಂಗತ ಶಂಕರ ಪಾಂಡೆ ಹಾಗೂ ದಿವಂಗತ ಸತೀಶ ಪಾಂಡೆ ಕುಟುಂಬದವರು ಗಾಮನಗಟ್ಟಿಯಲ್ಲಿ ಅಭಿವೃದ್ಧಿಯಾಗುತ್ತಿದ್ದ ಲೇಔಟ್‌ನಲ್ಲಿ ಸೈಟ್ ಖರೀದಿಸಲು ಪೃಥ್ವಿ ಡೆವಲಪರ್ಸ್ ಜೊತೆ ಒಪ್ಪಂದ ಮಾಡಿಕೊಂಡು ಪ್ರತಿ ಪ್ಲಾಟ್‌ಗೆ ರೂ. 12 ಲಕ್ಷ ಹಣ ಪಾವತಿಸಿದ್ದರು. ಆದರೆ ಡೆವಲಪರ್‌ಗಳು ಪ್ಲಾಟ್ ಅಭಿವೃದ್ಧಿಪಡಿಸದೇ, ಹಣವನ್ನು ಮರಳಿ ನೀಡದೆ ಗ್ರಾಹಕರನ್ನು ಸತಾಯಿಸುತ್ತಿದ್ದರು.

ಇದರಿಂದ ಬೇಸತ್ತ ದೂರುದಾರರು ಗ್ರಾಹಕರ ರಕ್ಷಣಾ ಕಾಯ್ದೆಯಡಿ ಸೇವಾ ನ್ಯೂನ್ಯತೆ ಆರೋಪಿಸಿ 11.09.2025ರಂದು ಜಿಲ್ಲಾ ಗ್ರಾಹಕರ ಆಯೋಗಕ್ಕೆ ಪ್ರತ್ಯೇಕ ದೂರುಗಳನ್ನು ಸಲ್ಲಿಸಿದ್ದರು. ಪ್ರಕರಣದ ವಿಚಾರಣೆ ನಡೆಸಿದ ಆಯೋಗದ ಅಧ್ಯಕ್ಷ ಈಶಪ್ಪ ಭೂತೆ ಹಾಗೂ ಸದಸ್ಯೆ ವಿಶಾಲಾಕ್ಷಿ ಅ. ಬೋಳಶೆಟ್ಟಿ ಅವರು, ಡೆವಲಪರ್‌ಗಳು ಗ್ರಾಹಕರಿಂದ ಪಡೆದ ಹಣವನ್ನು ವೈಯಕ್ತಿಕ ಬಳಕೆಗಾಗಿ ಬಳಸಿಕೊಂಡು ಪ್ಲಾಟ್ ನೀಡದೇ ಮೋಸ ಮಾಡಿದ್ದಾರೆ ಎಂದು ತೀರ್ಪು ನೀಡಿದರು.

ಆಯೋಗವು ಶಿವನಗೌಡ ಪಾಟೀಲ ಅವರು ದೂರುದಾರ–ರಿಂದ ಪಡೆದ ಮೊತ್ತವನ್ನು ಶೇಕಡಾ 10 ಬಡ್ಡಿ ಸಹಿತ, ಪಾವತಿಸಿದ ದಿನಾಂಕದಿಂದ ಲೆಕ್ಕ ಹಾಕಿ ಒಂದು ತಿಂಗಳೊಳಗೆ ಮರುಪಾವತಿಸಲು ಆದೇಶಿಸಿದೆ. ಜೊತೆಗೆ ದೂರುದಾರರಿಗೆ ಉಂಟಾದ ಅನಾನುಕೂಲ ಮತ್ತು ಮಾನಸಿಕ ಹಾನಿಗೆ ತಲಾ ರೂ. 50,000 ಪರಿಹಾರ ಹಾಗೂ ತಲಾ ರೂ. 10,000 ಪ್ರಕರಣ ವೆಚ್ಚವನ್ನು ನೀಡುವಂತೆ ಸೂಚಿಸಿದೆ.

## ವಾಕಿಂಗ್ ಮಾಡುತ್ತಿದ್ದ ಮೂವರ ಮೇಲೆ ಹರಿದ ಕಾರು! ಶಿಕ್ಷಕ ಸೇರಿ ಇಬ್ಬರು ಸಾವು




■ವಿಜಯಸಾಕ್ಷಿ ಸುದ್ದಿ, ಲಕ್ಷ್ಮೇಶ್ವರ

ಪಟ್ಟಣದ ಹುಬ್ಬಳ್ಳಿ ರಸ್ತೆಯಲ್ಲಿ ನಿತ್ಯದಂತೆ ವಾಯುವಿಹಾರಕ್ಕೆ ತೆರಳಿದ್ದವರ ಮೇಲೆ ನಸುಕಿನಲ್ಲೇ ಕಾರು ಹರಿದು ಬಂದ ಪರಿಣಾಮ ಓರ್ವ ಶಿಕ್ಷಕ ಸೇರಿ ಇಬ್ಬರು ಸ್ಥಳದಲ್ಲೇ ಮೃತಪಟ್ಟಿರುವ ದುರ್ಘಟನೆ ಬುಧವಾರ ಬೆಳಗಿನ ಜಾವ ಸಂಭವಿಸಿದೆ.

ತಾಲೂಕಿನ ಅಕ್ಕಿಗುಂದ ತಾಂಡಾದಲ್ಲಿ ಶಿಕ್ಷಕರಾಗಿ ಸೇವೆ ಸಲ್ಲಿಸುತ್ತಿದ್ದ ಈಶ್ವರನಗರದ ಅಶೋಕ ಸರವಿ (51) ಹಾಗೂ ಈಶ್ವರನಗರದ ರಿಕ್ಷಾ ಚಾಲಕ ಶಿವಾನಂದ ಹುಲಕೋಟಿ (54) ಮೃತಪಟ್ಟ ದುರ್ದೈವಿಗಳಾಗಿದ್ದಾರೆ.

ಘಟನೆಯ ವಿವರದ ಪ್ರಕಾರ, ಹುಬ್ಬಳ್ಳಿ ರಸ್ತೆಯ ಲಿಟಲ್ ಹಾರ್ಟ್ಸ್ ಶಾಲೆ ಮತ್ತು ಬಿ.ಎಡ್ ಕಾಲೇಜು ಮಧ್ಯದ ರಸ್ತೆಯಲ್ಲಿ ವಾಯುವಿಹಾರ ಮಾಡುತ್ತಿದ್ದ ವೇಳೆ ಹುಬ್ಬಳ್ಳಿ ಕಡೆಯಿಂದ ಲಕ್ಷ್ಮೇಶ್ವರಕ್ಕೆ ಬರುತ್ತಿದ್ದ ಕಾರು ನಿಯಂತ್ರಣ ತಪ್ಪಿ ಪಾದಚಾರಿಗಳ ಮೇಲೆ ಡಿಕ್ಕಿ ಹೊಡೆದಿದೆ. ಡಿಕ್ಕಿಯ ಪರಿಣಾಮ ಇಬ್ಬರು ಸ್ಥಳದಲ್ಲೇ ಮೃತಪಟ್ಟಿದ್ದು, ಶಿಕ್ಷಕ ಮಂಜುನಾಥ ಚಾಕಲಬ್ಬಿ ಗಾಯಗೊಂಡಿದ್ದಾರೆ. ಅವರನ್ನು ಸರ್ಕಾರಿ ಸಮುದಾಯ ಆರೋಗ್ಯ ಕೇಂದ್ರದಲ್ಲಿ ಚಿಕಿತ್ಸೆ ನೀಡಲಾಗಿದೆ.

ಬುಧವಾರ ಬೆಳಿಗ್ಗೆ ಗುಡುಗು□ಮಿಂಚಿನ ಅಬ್ಬರದಿಂದ ಮಳೆ ಬೀಳುವ ಸಾಧ್ಯತೆ ಇದ್ದುದರಿಂದ ವಾಯುವಿಹಾರಕ್ಕೆ ತೆರಳಿದ್ದವರು ಅರ್ಧದಲ್ಲೇ ಮನೆ ಕಡೆಗೆ ಮರಳುತ್ತಿದ್ದ ಸಂದರ್ಭದಲ್ಲಿ ಈ ಅಪಘಾತ ಸಂಭವಿಸಿದೆ ಎಂದು ತಿಳಿದು ಬಂದಿದೆ.

ಘಟನೆ ತಿಳಿಯುತ್ತಿದ್ದಂತೆ ಕುಟುಂಬಸ್ಥರು ಸ್ಥಳಕ್ಕೆ ಧಾವಿಸಿ ಮೃತದೇಹಗಳನ್ನು ಕಂಡು ರೋದಿಸುತ್ತಿದ್ದ ದೃಶ್ಯ ಮನಕಲಕುವಂತಿತ್ತು. ಎರಡು ಕುಟುಂಬಗಳ ಸದಸ್ಯರ ಅಕ್ರಂದನ ಮುಗಿಲು ಮುಟ್ಟಿದ್ದು, ಸ್ನೇಹಿತರು ಹಾಗೂ ಸಹೋದ್ಯೋಗಿಗಳು ಕಣ್ಣೀರಿನಲ್ಲಿ ಮುಳುಗಿದರು. ಸುದ್ದಿ ತಿಳಿದು ಸರ್ಕಾರಿ ಆಸ್ಪತ್ರೆ ಮುಂದೆ ಶಿಕ್ಷಕರ ಬಳಗ ಮತ್ತು ಸಾರ್ವಜನಿಕರು ಜಮಾಯಿಸಿದರು.

ಅಪಘಾತದ ಮಾಹಿತಿ ತಿಳಿದ ಕೂಡಲೇ ಲಕ್ಷ್ಮೇಶ್ವರ ಪಿಎಸ್‌ಐ ನಾಗರಾಜ ಗಡದ ಹಾಗೂ ಪೊಲೀಸ್ ಸಿಬ್ಬಂದಿ ಸ್ಥಳಕ್ಕೆ ಭೇಟಿ ನೀಡಿ ಪರಿಶೀಲನೆ ನಡೆಸಿ ಪ್ರಕರಣ ದಾಖಲಿಸಿಕೊಂಡಿದ್ದಾರೆ. ಘಟನೆಯ ಕುರಿತು ತನಿಖೆ ಮುಂದುವರಿದಿದೆ.

ಶಿವಮೊಗ್ಗದಲ್ಲಿ ಪಶುಪತಿನಾಥ ಪಂಚಮುಖಿ ದೇವಸ್ಥಾನ ಉದ್ಘಾಟನೆ, ಧರ್ಮ ಜಾಗೃತಿ ಸಮಾರಂಭದಲ್ಲಿ ರಂಭಾಪುರಿ ಜಗದ್ಗುರುಗಳು

# "ಬದುಕು ಸಮೃದ್ಧಗೊಳ್ಳಲು ದೇವರ ಕಾರುಣ್ಯ ಅಗತ್ಯ"

■ವಿಜಯಸಾಕ್ಷಿ ಸುದ್ದಿ, ಶಿವಮೊಗ್ಗ

"ವಿದ್ಯೆ, ಬುದ್ಧಿ, ಜೀವನ–ಅವು ಭಗವಂತನ ಅನುಗ್ರಹದಿಂದಲೇ ಸಾಧ್ಯ. ಬದುಕು ಸಮೃದ್ಧಗೊಳ್ಳಲು ದೇವರ ಕಾರುಣ್ಯ ಕಿರಣ ಅತ್ಯಗತ್ಯ" ಎಂದು ಡಾ. ವೀರ ಸೋಮೇಶ್ವರ ಜಗದ್ಗುರುಗಳು ಅಭಿಪ್ರಾಯಪಟ್ಟರು.

ನಗರದ ಶ್ರೀ ವೀರಶೈವ ಸಾಂಸ್ಕೃತಿಕ ಭವನದ ಪಕ್ಕದಲ್ಲಿ ನೂತನವಾಗಿ ನಿರ್ಮಿಸಿದ ಪಶುಪತಿನಾಥ ಪಂಚಮುಖಿ ದೇವಸ್ಥಾನದ ಉದ್ಘಾಟನೆ, ಪ್ರಾಣ ಪ್ರತಿಷ್ಠಾಪನೆ ಮತ್ತು ಕಳಸಾರೋಹಣ ಅಂಗವಾಗಿ ನಡೆದ ಜನಜಾಗೃತಿ ಧರ್ಮ ಸಮಾರಂಭದಲ್ಲಿ ಅವರು ಆಶೀರ್ವಚನ ನೀಡಿದರು.

ಮನುಷ್ಯ ಜೀವನದಲ್ಲಿ ದೇವರು ಮತ್ತು ಮರಣವನ್ನು ಮರೆಯಬಾರದು. ದ್ವೇಷವಿಲ್ಲದ ಜೀವನವೇ ಸುಖಶಾಂತಿಯ ಮೂಲ. ನಡೆ–ನುಡಿಗಳ ಜೊತೆಗೆ ಮನಸ್ಸಿನ ಶುದ್ಧತೆಯೇ ನಿಜವಾದ ಆಧ್ಯಾತ್ಮ ಎಂದು ಅವರು ಹೇಳಿದರು. ವೀರಶೈವ ಧರ್ಮದ ದಶಸೂತ್ರಗಳನ್ನು ಬೋಧಿಸಿದ ರೇಣುಕಾಚಾರ್ಯರ ಸಂದೇಶಗಳು ಇಂದಿಗೂ ಪ್ರಸ್ತುತವಾಗಿವೆ ಎಂದು ತಿಳಿಸಿದರು.




ಸಮಾರಂಭವನ್ನು ಉದ್ಘಾಟಿಸಿದ ಸಂಸದ ಬಿ.ವೈ. ರಾಘವೇಂದ್ರ ಮಾತನಾಡಿ, ನಾಗರಿಕತೆಯ ಹೆಸರಿನಲ್ಲಿ ಜೀವನ ಮೌಲ್ಯಗಳು ಕಣ್ಮರೆಯಾಗಬಾರದು. ಆಚಾರ–ವಿಚಾರಗಳ ಸಮನ್ವಯದಿಂದ ಸಮತೋಲನ ಜೀವನ ಸಾಧ್ಯ ಎಂದರು.

ಮಾಜಿ ಸಂಸದ ಆಯನೂರ ಮಂಜುನಾಥ ಮಾತನಾಡಿ, ಪಶುಪತಿನಾಥ ಪಂಚಮುಖಿ ಶಿವಲಿಂಗ ಸ್ಥಾಪನೆ ಶಿವಮೊಗ್ಗಕ್ಕೆ ವಿಶೇಷ ಗೌರವ ತಂದಿದೆ ಎಂದು ಹೇಳಿದರು.

ಕಾರ್ಯಕ್ರಮದಲ್ಲಿ ವಿಧಾನ ಪರಿಷತ್ ಸದಸ್ಯ ಡಾ. ಧನಂಜಯ ಸರ್ಜಿ, ಎಸ್. ಎಸ್. ಜ್ಯೋತಿ ಪ್ರಕಾಶ, ಬಳ್ಳೆಕೆರೆ ಸಂತೋಷ, ಕಟ್ಟೆ ಶ್ರೀನಿವಾಸ, ಎಸ್.ಎಸ್. ಷಡಕ್ಷರಿ, ಸೂಡಾ ಅಧ್ಯಕ್ಷ ಸುಂದರೇಶ ಸೇರಿದಂತೆ ಅನೇಕರು ಭಾಗವಹಿಸಿದ್ದರು.

ಎಡೆಯೂರು ಕ್ಷೇತ್ರದ ರೇಣುಕ ಶಿವಾಚಾರ್ಯ ಸ್ವಾಮಿಗಳು ನೇತೃತ್ವ ವಹಿಸಿ ಮಾತನಾಡಿ, ವೀರಶೈವ ಧರ್ಮವು ಮಾನವೀಯ ಮೌಲ್ಯಗಳನ್ನು ಬಲಪಡಿಸುವ ಧರ್ಮವಾಗಿದೆ ಎಂದರು. ಬಿಳಕಿ ಹಿರೇಮಠದ ರಾಚೋಟೇಶ್ವರ ಶಿವಾಚಾರ್ಯರು ಹಾಗೂ ತಾವರೆಕೆರೆ ಶಿಲಾಮಠದ ಡಾ. ಅಭಿನವ ಸಿದ್ಧಲಿಂಗ ಶಿವಾಚಾರ್ಯರು ಧರ್ಮ ಸಂಸ್ಕೃತಿ ಕುರಿತು ಉಪನ್ಯಾಸ ನೀಡಿದರು.

> "ಆಧ್ಯಾತ್ಮದ ಅರಿವು ಮತ್ತು ಶುದ್ಧ ಮನಸ್ಸು ಜೀವನವನ್ನು ಉಜ್ವಲಗೊಳಿಸುತ್ತದೆ"
> – ರಂಭಾಪುರಿ ಜಗದ್ಗುರುಗಳು

ಈ ಸಂದರ್ಭದಲ್ಲಿ ದೇವಸ್ಥಾನ ನಿರ್ಮಾಣಕ್ಕೆ ಸಹಕರಿಸಿದ ದಾನಿಗಳನ್ನು ಸನ್ಮಾನಿಸಲಾಯಿತು. ವೀರಶೈವ ಕಲ್ಯಾಣ ಮಂದಿರದ ಅಧ್ಯಕ್ಷ ಜೆ. ವಿರೂಪಾಕ್ಷಪ್ಪ ಅಧ್ಯಕ್ಷತೆ ವಹಿಸಿದ್ದರು. ಕಾರ್ಯಕ್ರಮದ ಬಳಿಕ ಅನ್ನದಾಸೋಹ ಜರುಗಿತು.

VIJAYA SAKSHI KANNADA DAILY MORNING Editor, Printer, Publisher, & Owned by : Hussainsab M. Shareefanavar, H.No. 130/154, Balaji Nagar, Near Ring Road, Gadag-582103, Dist : Gadag- Karnataka Printed at : Sai Printing Press, Near Joda Maruti Temple, Gadag-582101, Dist : Gadag- Karnataka